ಐಕ್ಯರಂಗ

ವಾರಪತ್ರಿಕೆ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ಮುಖಪತ್ರಿಕೆ

ಸಂಪುಟ 9 ಸಂಚಿಕೆ 25 ಜೂನ್ 21, 1987 ಬೆಲೆ 1 ರೂ.

ಒಳಗಿನ ಪುಟಗಳಲ್ಲಿ

ರಾಜೀವ ಸರ್ಕಾರದ ಬಗ್ಗೆ ಸೋವಿಯತ್ ಕಮ್ಯುನಿಸ್ಟರ ನಿಲುವು ಹಾಗೂ ಸಿಪಿಐ (ಎಂ)
★ ಕಾಂ.ಇ.ಎಂ.ಎಸ್. ರವರೊಡನೆ ಪ್ರಶ್ನೋತ್ತರ
ಆರ್ಥಿಕ ಸಮೀಕ್ಷೆ ಪುಟ–2
★ ಭ್ರಷ್ಟಾಚಾರ ಕಪ್ಪು, ಹಣ ಆರ್ಥಿಕ ದುಃಸ್ಥಿಯ ಕರಾಳ ರೂಪ.
ಭಾರತದಲ್ಲಿ ಆಫ್ರಿಕಾ ಸಂಸ್ಕೃತಿಯ ಪ್ರತಿಬಿಂಬ
★ ವಿದ್ಯುತ್ ದರ ಏರಿಕೆ ಹಿಂದಿನ ರಾಜಕೀಯ
ಚುನಾವಣೆಗಳ ಹಣದ ಮೂಲ ವಿ.ಪಿ.ಸಿಂಗ್ ಪುಟ–7
★ "ಈ ವಾರ" ಮತ್ತಿತರ ಸುದ್ದಿಗಳು

ಪಿ. ಬಿ. ಪತ್ರಿಕಾ ಹೇಳಿಕೆ

ವಿರೋಧ ಪಕ್ಷಗಳ ಒಕ್ಕೂಟವಲ್ಲ, ಐಕ್ಯ ಕಾರ್ಯಾಚರಣೆ

ಏಪ್ರಿಲ್‌ನ ಮುಖ್ಯಮಂತ್ರಿಗಳ ಸಭೆಯನ್ನೂ ಹಾಗೂ ವಿರೋಧ ಪಕ್ಷಗಳ ಸಮ್ಮೇಳನವನ್ನು ವಿಮರ್ಶಿಸಿದ ಸಿ.ಪಿ.ಐ.(ಎಂ) ಪಾಲಿಟ್‌ಬ್ಯೂರೊ, ಈ ಸಭೆಗಳು ಜಾತ್ಯಾತೀತ ವಿರೋಧ ಪಕ್ಷಗಳು ಲೋಕ ಸಭೆಯ ಒಳಗೆ ಹೊರಗೆಲ್ಲಾ ಪ್ರತಿಧ್ವನಿಸುತ್ತಿರುವ ಭ್ರಷ್ಟಾಚಾರದಂತಹ ಸುಡುತ್ತಿರುವ ಸಮಸ್ಯೆಗಳ ಬಗ್ಗೆ ಒಟ್ಟಿಗೆ ಕೂಡಲು ಸಾಧ್ಯವಾಗಿದೆ. ಈ ವಿಷಯ ಹಾಗೂ ಇತರ ಪ್ರಮುಖ ವಿಷಯಗಳ ಬಗ್ಗೆ ಸ್ವತಂತ್ರವಾಗಿ ಹಾಗೂ ಜಂಟಿ ಕಾರ್ಯಕ್ರಮ ಕೈಗೊಳ್ಳಬೇಕೆಂದು ತೀರ್ಮಾನಿಸಿದೆ.

ವಿರೋಧ ಪಕ್ಷಗಳ ಒಕ್ಕೂಟದ ಬಗ್ಗೆ, ಪ್ರಸ್ತಾಪದ ಬಗ್ಗೆ ಅದು ಸಾಧ್ಯವೂ ಅಲ್ಲ ಅಪೇಕ್ಷಣೀಯವೂ ಅಲ್ಲ. ಎಡ ಮತ್ತು ಇತರ ಜಾತ್ಯಾತೀತ ವಿರೋಧ ಪಕ್ಷಗಳ ಅನೇಕ ಪ್ರಶ್ನೆಗಳ ಬಗ್ಗೆ ಪರಸ್ಪರ ಒಪ್ಪಿದ್ದರೂ ರಾಷ್ಟ್ರವನ್ನು ರೂಪಿಸುವ ಪ್ರಮುಖ ಧೋರಣೆಗಳ ಬಗ್ಗೆ ಭಿನ್ನಾಭಿಪ್ರಾಯವಿದೆ. ಆದುದರಿಂದ ಔಪಚಾರಿಕವಾದ ವಿರೋಧಿ ಒಕ್ಕೂಟದ ರಂಗವಲ್ಲ. ಈಗ ಅವಶ್ಯವಾಗಿರುವುದು, ಆದರೆ ಜನರ ಜೀವಿತದ ಪ್ರಶ್ನೆಗಳ ಮೇಲೆ ಸಾಧ್ಯವಾದಷ್ಟು ಹೆಚ್ಚು ಜಾತ್ಯಾತೀತ ಪಕ್ಷಗಳನ್ನು ಒಳಗೊಳ್ಳುವ ಸಂಯುಕ್ತ ಕ್ರಮವನ್ನು ಕೈಗೊಳ್ಳಬೇಕು. ಶ್ರೀನಗರ, ಕಲ್ಕತ್ತಾಗಳ ಶೃಂಗ ಸಭೆಗಳ ತೀರ್ಮಾನವನ್ನು ಆಧಾರವಾಗಿಟ್ಟುಕೊಂಡು ಈ ಸಂಯುಕ್ತ ಚಳುವಳಿ ಕೈಗೊಳ್ಳಬೇಕು ಎಂದು ಪಿ.ಬಿ. ಅಭಿಪ್ರಾಯಪಟ್ಟಿತು.

ಮೀರತ್ ಗಲಭೆ

ಕೇರಳದ ಚುನಾವಣೆಗಳ ಫಲಿತಾಂಶಗಳಿಂದ ಕಾಂಗ್ರೆಸ್(ಐ) ಯಾವ ಪಾಠವನ್ನೂ ಕಲಿಯದೆ ಜಾತೀಯ, ಮತೀಯ ಶಕ್ತಿಗಳ ಜೊತೆ ಸಖ್ಯದ ತನ್ನ ದಿವಾಳಿಕೋರ ನೀತಿಯನ್ನು ಕೇರಳದಲ್ಲಿ ಮಾತ್ರವೇ ಅಲ್ಲ ದೇಶದ ಇತರ ಭಾಗಗಳಲ್ಲಿಯೂ ಮುಂದುವರಿಸಿದೆ. ಬಹುಸಂಖ್ಯಾ ಹಾಗೂ ಅಲ್ಪ ಸಂಖ್ಯಾ ಕೋಮುವಾದದ ಮೂಲಭೂತವಾದಿಗಳ ದಾಳಿಗಳು ಒಂದೆಡೆ ಮತ್ತೊಂದೆಡೆ ಅವಕಾಶವಾದೀ ಮೈತ್ರಿಯನ್ನು ಮಾಡಿಕೊಳ್ಳುವ ಕಾಂಗ್ರೆಸ್ ನೀತಿ ಮೀರತ್‌ನಲ್ಲಿ ಎರಡು ಜಾತ್ಯಾಂಧ ಗಲಭೆಗಳ ಅಲೆಗಳಿಗೆ ಕಾರಣವಾಗಿದೆ.

ಈ ಜಾತಿವಾದಿ ಶಕ್ತಿಗಳ ಜೊತೆ ಪಿ.ಎ.ಸಿ.ಅಥವಾ ಪ್ರಾಂತೀಯ ಪೊಲೀಸ್ ಪಡೆ ಕೂಡ ಅಲ್ಪ ಸಂಖ್ಯಾಕರ ಮೇಲೆ ದಾಳಿ ಮಾಡಿದೆ. ದಂಗೆಗಳಿಗೆ ಅನುಕೂಲವಾಗುವ ಪರಿಸ್ಥಿತಿಯನ್ನು ನಿರ್ಮಾಣ ಮಾಡಿದ್ದಕ್ಕೆ ಅಲ್ಲಿಯ ಪೋಲೀಸ್ ಪಡೆಯ ಭಯೋತ್ಪಾದಕ ಕೃತ್ಯಕ್ಕೆ ದೇಶದ ಕಾಂಗ್ರೆಸ್ ಪಕ್ಷ ಹಾಗೂ ಉತ್ತರ ಪ್ರದೇಶ ಸರ್ಕಾರವೇ ಹೊಣೆ. ಈ ಪಿ.ಎ.ಸಿ.ಯನ್ನು ವಜಾ ಮಾಡುವ ಬೇಡಿಕೆಗೆ ಪಿ. ಬಿ. ಬೆಂಬಲ ನೀಡಿದೆ. ರಾಷ್ಟ್ರೀಯ ಭಾವೈಕ್ಯತ ಪರಿಷತ್ತಿನಲ್ಲಿ. ಸಿ.ಪಿ.ಐ.(ಎಂ)ಹಾಗೂ ಇತರ ಜಾತ್ಯಾತೀತ ಪಕ್ಷಗಳು ಆಳುವ ಪಕ್ಷ ಜಾತೀವಾದ ಕೋಮುವಾದವನ್ನು ಸಂದರ್ಭಸಾದಕವಾಗಿ ಉಪಯೋಗಿಸಿಕೊಳ್ಳುತ್ತಿರುವುದೇ ರಾಜ್ಯದಿಂದ ರಾಜ್ಯಕ್ಕೆ ಗಲಭೆಗಳು ಹಬ್ಬುತ್ತಿರುವುದಕ್ಕೆ ಕಾರಣ ಎಂದು ತೀವ್ರ ಟೀಕೆ ಮಾಡಿದೆ.

ಬಿಹಾರ್ ಹತ್ಯಾಕಾಂಡ

ಬಿಹಾರದಲ್ಲಿ ಒಂದು ಜಾತಿಯ ವಿರುದ್ಧ ಮತ್ತೊಂದು ಜಾತಿಯನ್ನು ಎತ್ತಿಕಟ್ಟುವ ಕಾಂಗ್ರೆಸ್‌ಪಕ್ಷ ಹಾಗೂ ಬಿಹಾರದ ಸರ್ಕಾರ ಬಿಹಾರದ ಘಟನೆಯ ಹೊಣೆಯಿಂದ ತಪ್ಪಿಸಿಕೊಳ್ಳಲಾಗುವುದಿಲ್ಲ. ದಲೇಲ್‌ಚೆಕ್ ಹಾಗೂ ಬಾಗ್ವಾರ ಹಳ್ಳಿಗಳಲ್ಲಿ ನಡೆದ ಈ ಘಟನೆಯಲ್ಲಿ ಧಾಳಿ–ಪ್ರತಿಧಾಳಿಗಳು ಕಾನೂನು ಸುವ್ಯವಸ್ಥೆಯು ಪೂರ್ಣವಾಗಿ ಕುಸಿಯಲು ಕಾರಣವಾಗಿವೆ. ಈ ರಾಜ್ಯ ಸರ್ಕಾರ ರಾಜೀನಾಮೆ ಕೊಡಬೇಕೆಂದು ಒತ್ತಾಯಿಸಿ ವಿರೋಧ ಪಕ್ಷಗಳ ಜೊತೆ ಪಕ್ಷದ ಪಿ ಬಿ.ಕೂಡ ಸೇರುತ್ತದೆ ಎಂದು ನಿರ್ಣಯಿಸಿದೆ.

ಬೊಫೋರ್ಸ್ ಹಗರಣ – ಕೊನೆಗೂ ಸಂಸದೀಯ ಸಮಿತಿ

ಸ್ವೀಡನ್ನಿನ ಆಡಿಟ್‌ಬ್ಯೂರೋ(ಲೆಕ್ಕ ಪರಿಶೋಧನಾ ಕಛೇರಿ) ದ ವರದಿ ಬೋಫೋರ್ಸ್ ಹಗರಣದ ಮೇಲಿನ ತೆರೆಯನ್ನು ಸರಿಸಿ ರಾಜೀವ್ ಸರ್ಕಾರದ ಸುಳ್ಳುಗಳ ಕಂತೆಯನ್ನು ಬಯಲಿಗೆಳೆದಿದೆ.

ಈ ವರದಿಯ ಪ್ರಕಾರ, 1. ಕಮಿಶನ್ ಇತ್ಯರ್ಥದ ಬಗ್ಗೆ ಒಂದು ಒಪ್ಪಂದ ಇದೆ,

2. "ಆಡಳಿತಾತ್ಮಕ ಉದ್ದೇಶಗಳಿಗಾಗಿ" ಭಾರತದಲ್ಲಿ ಸ್ಥಳೀಯಏಜೆಂಟ್ ಮಾತ್ರ ಇದ್ದರು ಎಂಬ ಬೊಫೋರ್ಸ್ ಹೇಳಿಕೆಗಳಿಗೆ ವ್ಯತಿರಿಕ್ತವಾಗಿ 1986 ರಲ್ಲಿ ಒಪ್ಪಂದದ ನಂತರ ಹಲವಾರು ಮಂದಿಗೆ "ಗಣನೀಯ ಮೊತ್ತ" ನೀಡಲಾಗಿದೆ.

3. ಈ ಅವಧಿಯಲ್ಲಿ "ಇತರ ಪಾವತಿಗಳು" ಕೆಲವಿವೆ. ಇದನ್ನು ಪಡೆದವರ ಹೆಸರುಗಳು ಪಾವತಿಯ ಉದ್ದೇಶದ ಬಗ್ಗೆ ಪೂರ್ಣ ಮಾಹಿತಿಯನ್ನು ಆಡಿಟ್ ಬ್ಯೂರೋಗೆ ನಿರಾಕರಿಸಲಾಯಿತು. ಇವುಗಳಲ್ಲಿ ಒಂದನ್ನು ಸ್ವಿಸ್ ಬ್ಯಾಂಕ್ ಖಾತೆಗೆ, ಇನ್ನೊಂದನ್ನು ಜಿನೇವಾದ ಬ್ಯಾಂಕ್ ಖಾತೆಗೆ ವರ್ಗಾಯಿಸಲಾಗಿದೆ. ಸ್ವೀಡನ್ ಸರ್ಕಾರ ಸ್ವಿಸ್ ಬ್ಯಾಂಕ್ ಖಾತೆಗಳ ತನಿಖೆ ಮಾಡಲು ಆಡಿಟ್ ಬ್ಯೂರೋಗೆ ಅನುಮತಿ ನೀಡಲಿಲ್ಲ.

ಇದರಿಂದ ವಿನ್‌ಚಾಡಾ ಎಂಬ ಭಾರತೀಯ ಏಜೆಂಟ್ ಪಡೆದ ಕಮಿಷನ್ ಬಹಳ ಕಮ್ಮೀ ಪ್ರಮುಖ ಪಾಲನ್ನು ಸ್ವಿಟ್ಸ್ ಬ್ಯಾಂಕ್, ಖಾತೆಗೆ ವರ್ಗಾಯಿಸಲಾಗಿದೆ ಎಂಬುದು ಈಗ ಸ್ಪಷ್ಟ. ಈ ಪರಿಸ್ಥಿತಿಯಲ್ಲಿ ಭಾರತ ಸರ್ಕಾರ ನೇಮಿಸಲು ನಿರ್ಧರಿಸುವ ಆಯೋಗಕ್ಕೆ, ಈ ವ್ಯವಹಾರದ ಎಲ್ಲ, ಆಯಾಮಗಳನ್ನು ಆಮೂಲಾಗ್ರವಾಗಿ ಪರಿಶೀಲಿಸುವ ಅಧಿಕಾರ ನೀಡಬೇಕು ಬ್ಯಾಂಕ್ ಆಫ್ ಸ್ವೀಡನ್ ಒದಗಿಸಿದ ಗುಪ್ತಮಾಹಿತಿಯನ್ನು ಕೊಡಲು, ಬೆಫೋರ್ಸ್ ಮಾಡಿದ "ಇತರೆ ಪಾವತಿ" ಗಳು ಮತ್ತು "ಭಾರತದಲ್ಲಿ ಅದರ ಸಂಪರ್ಕ

[8ನೇ ಪುಟ ನೋಡಿ]

ಸಂಪಾದಕೀಯ

ಪ್ರವಾಸದಿಂದ ಹಿಂದಿರುಗಿದ

ಮುಖ್ಯಮಂತ್ರಿ ಉತ್ತರಿಸಬೇಕಾದ ಪ್ರಶ್ನೆಗಳು

– ಪಿ. ರಾಮಚಂದ್ರರಾವ್

ಶ್ರೀ ರಾಮಕೃಷ್ಣ ಹೆಗ್ಡೆಯವರು ತಮ್ಮ ಆರು ವಾರಗಳ ವಿದೇಶ ಪ್ರಯಾಣ ಮುಗಿಸಿ ಇದೀಗ ಕರ್ನಾಟಕಕ್ಕೆ ಹಿಂದಿರುಗಿದ್ದಾರೆ. ಜಿಲ್ಲಾ ಪರಿಷತ್ ಮತ್ತು ಮಂಡಲ ಪಂಚಾಯತುಗಳ ಚುನಾವಣೆಗಳನ್ನು ನಡೆಸಿ, ಸಾಕಷ್ಟು ಬಹುಮತವನ್ನು ಈ ಚುನಾವಣೆಗಳಲ್ಲಿ ಪಡೆದುಕೊಂಡು, ಹಾಗೂ ಅದರ ಬೆನ್ನಿನಲ್ಲೇ ಅತೃಪ್ತ ಜನತಾ ಎಂ.ಎಲ್.ಎ.ಗಳನ್ನೆಲ್ಲಾ ಸೇರಿಸಿಕೊಂಡು 'ಏರ್‌ಬಸ್ ಮಂತ್ರಿಮಂಡಲ'ವನ್ನು ರಚಿಸಿದ ಶ್ರೀ ಹೆಗ್ಡೆಯವರು ಆಗ ವಿದೇಶಕ್ಕೆ ಪ್ರಯಾಣ ಬೆಳೆಸಿದಾಗ "ರಾಜ್ಯದ ಪರಿಸ್ಥಿತಿ ಸ್ಥಿರವಾಗಿದೆ" ಎಂದು ಹೇಳಿದ್ದನ್ನು ಇಲ್ಲಿ ನೆನಪು ಮಾಡಬಹುದು. ಈಗ ರಾಜ್ಯದ ಪರಿಸ್ಥಿತಿ ಹಾಗೆಯೇ ಇದೆಯೇ ಅಥವಾ ವ್ಯವಸ್ಥಿತವಾಗಿದೆಯೇ, ವ್ಯವಸ್ಥಿತವಾಗಿದ್ದರೆ ಯಾವ ದಿಕ್ಕಿನಲ್ಲಿ ಎಂಬುದನ್ನು ಪರಿಶೀಲಿಸುವುದು ಸೂಕ್ತ.

ಮುಖ್ಯವಾಗಿ, ರಾಜ್ಯದಲ್ಲಿ ಎದ್ದು ಕಾಣುವ ಸ್ಥಿತಿ ಹೀಗಿದೆ : ಒಂದನೇಯದಾಗಿ, ಜನತಾ ಸರ್ಕಾರವು ವಿದ್ಯುಚ್ಛಕ್ತಿ ದರಗಳನ್ನೂ, ಹಾಲಿನ ದರಗಳನ್ನೂ ವಿಪರೀತವಾಗಿ ಏರಿಸಿದುದು. ಇದರಿಂದಾಗಿ ರಾಜ್ಯದ ಜನತೆ ರೋಸಿಹೋಗಿದ್ದಾರೆ ಎಂಬುದರಲ್ಲಿ ಏನೂ ಸಂಶಯವಿಲ್ಲ–ಅದೂ ಕೇಂದ್ರ ಸರ್ಕಾರದ ಸುಮಾರು 12000 ಕೋಟಿ ಕೊರತೆ ಬಜೆಟ್‌ನ ಪರಿಣಾಮವಾಗಿ, ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಹೊಸ ಕರಗಳ ಹೇರಿಕೆಯಿಂದಾಗಿ ಪ್ರತಿ ಕುಟುಂಬದ ಆಯವ್ಯಯದಲ್ಲಿ ತೀವ್ರ ಏರಿಕೆಯಾಗಿರುವ ಹಿನ್ನೆಲ್ಲೆಯಲ್ಲಿ" ಎಲ್ಲಾ ವಿರೋಧ ಪಕ್ಷಗಳೂ ಈ ಬಗ್ಗೆ ತಮ್ಮ ವಿರೋಧವನ್ನು ವ್ಯಕ್ತಪಡಿಸಿದೆ. ಸಿ.ಪಿ.ಐ.(ಎಂ) ಮತ್ತು ಸಿ.ಪಿ.ಐ. ಪಕ್ಷಗಳು ಪ್ರಕ್ಷೋಭೆ ಕಾರ್ಯಕ್ರಮಗಳನ್ನು ಹಾಕಿವೆ. ಮಾತ್ರವಲ್ಲ, ಜನತಾ ಪಕ್ಷದ ಹಲವಾರು ಮುಖಂಡರೇ "ತಾವು ಈ ಕ್ರಮಗಳನ್ನು ಸಹಿಸುವುದಿಲ್ಲ" ಎಂದು ಸಾರಿದ್ದಾರೆ. ಇದರಿಂದೆಲ್ಲಾ ವಿದ್ಯುಚ್ಛಕ್ತಿ ಮಂತ್ರಿ ಸಿಡಿಮಿಡಿಗೊಂಡು ಜನತಾ ಪಕ್ಷದ ಹಿರಿಯರಾದ ಶ್ಯಾಮಣ್ಣನವರನ್ನು "ಮುದಿ ಹುಚ್ಚ"ಎಂದು ಛೇಡಿಸಿದ್ದರು. ಶ್ಯಾಮಣ್ಣನವರೂ ಜೆ. ಎಚ್. ಪಟೇಲರನ್ನು 'ಕುಡುಕ, ಎಂದು ಹೀಯಾಳಿಸಿದ್ದಾರೆ. ಶ್ರೀ ರಾಮಕೃಷ್ಣ ಹೆಗ್ಡೆಯವರು ಏನು ಹೇಳುತ್ತಾರೆ ಎಂಬುದನ್ನು ರಾಜ್ಯದ ಜನತೆ ಕಾದು ನೋಡುತ್ತಿದ್ದಾರೆ. (ಪ್ರಥಮ ಪ್ರತಿಕ್ರಿಯೆ ಜನತೆಗೆ ನಿರಾಸೆಯನ್ನುಂಟುಮಾಡುವಂತಹ ಪ್ರತಿಕ್ರಿಯೆಯಾಗಿದೆ.)

ಎರಡನೆಯದಾಗಿ, ಜಿಲ್ಲಾ ಪರಿಷತ್ ಮತ್ತು ಮಂಡಲ ಪಂಚಾಯತುಗಳ ಪ್ರಧಾನ ಮತ್ತು ಉಪ ಪ್ರಧಾನರ ಚುನಾವಣೆಗಳಲ್ಲಿ "ಜನತಾ ಪಕ್ಷ" ಮತ್ತು 'ಕಾಂಗ್ರೆಸ್ (ಐ) ಪಕ್ಷ' ಅನುಸರಿಸಿದ ಹೇಯ ತಂತ್ರಗಳು-ಕೊಲೆ. ಅಪಹರಣ, ಬೆದರಿಕೆ, ಉಮೇದ್ವಾರರ ಖರೀದಿ, ಇತ್ಯಾದಿ–ರಾಜ್ಯದ ಜನತೆಯಲ್ಲಿ 'ಜಿಗುಪ್ಸೆ' ಉಂಟು ಮಾಡಿವೆ.

[8ನೇ ಪುಟ ನೋಡಿ]

ಭ್ರಷ್ಟಾಚಾರ ಕಪ್ಪು ಹಣ ಆರ್ಥಿಕ ದುಃಸ್ಥಿತಿಯ ಕರಾಳ ರೂಪ

★ ತೆರಿಗೆ ತಪ್ಪಿಸುವಿಕೆ, ಲಂಚ, ರುಸುವತ್ತು, ಕಳ್ಳಸಂತೆ, ಕಳ್ಳಸಾಗಣಿಕೆ, ಜೂಜು, ಜುಗಾರಿ, ಶೇರು ಮಾರುಕಟ್ಟೆಗಳಲ್ಲಿ ಸಟ್ಟಾವ್ಯಾಪಾರ, ದರೋಡೆ, ಡಕಾಯಿತಿ, ಇತ್ಯಾದಿ ವಿಧಾನಗಳಿಂದ ಗಳಿಸುವ ಹಣವು ಬಂಡವಾಳಶಾಹಿ ಸಮಾಜದಲ್ಲಿಯೂ ಕಾನೂನು ಬಾಹಿರವಾಗಿದೆ. ಈ ಹಣ 'ಕಪ್ಪು ಹಣ' ಎಂದು ಪರಿಗಣಿಸಲ್ಪಡುತ್ತದೆ. ಭಾರತದಲ್ಲಿ ಕಪ್ಪು ಹಣದ ಗಾತ್ರ ಕನಿಷ್ಟ ರೂ.37000 ಕೋಟಿ, ಗರಿಷ್ಟ ರೂ.80000 ಕೋಟಿಯಷ್ಟಿದ್ದು, ಅದು ಒಂದು ಸಮನಾಂತರ ಆರ್ಥಿಕ ವ್ಯವಸ್ಥೆಯಾಗಿದೆ.

★ ಆರ್ಥಿಕ ದುಃಸ್ಥಿತಿಯು ಹೆಚ್ಚುತ್ತಿದ್ದಂತೆ ಭೂಮಾಲಿಕರು, ಬಂಡವಾಳಶಾಹಿಗಳು ಪರಾನ್ನ ಜೀವಿಗಳಾಗಿ ಪ್ರಾರಂಭದಲ್ಲಿದ್ದ ತಮ್ಮ ಧೀರತನ, ಸಾಹಸತನ, ಮುತ್ಸದ್ದಿತನ ಹಾಗೂ ಉದ್ಯಮಶೀಲತೆಯನ್ನು ಕಳೆದುಕೊಳ್ಳುವರು. ಕಪ್ಪುಹಣ ಗಳಿಸುವ ಸುಲಭ ಮಾರ್ಗ ಅನುಸರಿಸುವರು.

★ ಕಪ್ಪು ಹಣ ದ ಚಲಾವಣೆಯಿಂದ, ರಾಷ್ಟ್ರೀಯ ಆದ್ಯತೆಗನುಗುಣವಾದ ಯೋಜನಾ ಬದ್ಧವಾದ ಸಾರ್ವಜನಿಕ ಹಾಗೂ ಖಾಸಗಿ ಕ್ಷೇತ್ರಗಳ ಮೂಲಕ ಆರ್ಥಿಕ ಅಭಿವೃದ್ಧಿಗೆ ಸಂಪನ್ಮೂಲಗಳ ತೀವ್ರ ಕೊರತೆ ಉಂಟಾಗುವುದು. ಉತ್ಪಾದನೆ, ಉದ್ಯೋಗ ಅವಕಾಶಗಳು ಕುಂಠಿತವಾಗುತ್ತಿದ್ದು ಆರ್ಥಿಕ ದುಃಸ್ಥಿತಿಯು ತೀವ್ರವಾಗುವುದು.

★ ಆರ್ಥಿಕ ದುಃಸ್ಥಿತಿಯ ಸೂಚನೆಗಳು: ಕೃಷಿ ಕೈಗಾರಿಕಾ ಉತ್ಪಾದನೆಯಲ್ಲಿ ಸ್ಥಗಿತ, 250 ಮಿಲಿಯ ನಿರುದ್ಯೋಗಸ್ಥರು, ಗ್ರಾಮೀಣ ಬಡತನ, ದಾರಿದ್ರ್ಯ, ನಿರುದ್ಯೋಗ, ಒಂದು ಲಕ್ಷಕ್ಕೂ ಹೆಚ್ಚಿನ ಸಣ್ಣ-ಮಧ್ಯಮ ಕೈಗಾರಿಕಾ ಸಂಸ್ಥೆಗಳು ರೋಗಗ್ರಸ್ಥವಾಗಿರುವುದು. ಸಂಪನ್ಮೂಲಗಳ ಕೊರತೆ: ಕೇಂದ್ರ ಮುಂಗಡ ಪತ್ರದಲ್ಲಿ ರೂ. 8285ಕೋಟಿ [1986-87] ವಿದೇಶಿ ವ್ಯಾಪಾರದಲ್ಲಿ ರೂ.8700 ಕೋಟಿ (1985-86), ವಿದೇಶಿ ಸಾಲ ರೂ.40000 ಕೋಟಿ, ಒಟ್ಟು ತೆರಿಗೆಯಲ್ಲಿ ಪ್ರತ್ಯಕ್ಷ ತೆರಿಗೆಯಪಾಲು 85% ಬೆಲೆ ಏರಿಕೆ, ಹಣದುಬ್ಬರ. ಗ್ರಾಹಕರ ಬೆಲೆ ಸೂಚಿ-ಮಾರ್ಚ್ 1985, 585 ನವೆಂಬರ್ 1986:692 (1960-100),

★ ಗುತ್ತೆದಾರಿ ಬಂಡವಾಳಶಾಹಿಗಳೊಳಗೆ ತೀವ್ರ ಪೈಪೋಟಿ. ಉದಾ: ಟಾಟಾ-ಬಿರ್ಲಾ, ರಿಲೆಯಾನ್ಸ್-ಬಾಂಬೆ ಡೈಯಿಂಗ್. ಟಾಟಾರ ಒಟ್ಟು ಆಸ್ತಿ ಮೌಲ್ಯ: 1947ರಲ್ಲಿ ರೂ. 50 ಕೋಟಿ, 1980ರಲ್ಲಿ ರೂ. 1539 ಕೋಟಿ 1984ರಲ್ಲಿ ರೂ. 3120 ಕೋಟಿ, ಬಿರ್ಲಾರ ಒಟ್ಟು ಆಸ್ತಿಮೌಲ್ಯ 1947 ರಲ್ಲಿ ರೂ 47ಕೋಟಿ, 1980 ರೂ. 1432ಕೋಟಿ, 1984ರಲ್ಲಿ ರೂ. 3359 ಕೋಟಿ, 40ವರ್ಷಗಳ ನಂತರ ಮೊತ್ತ ಮೊದಲಬಾರಿಗೆ ಟಾಟಾರಿಗಿಂತ ಬಿರ್ಲಾರ ಮೇಲುಗೈ; ರಿಲೆಯಾನ್ಸ್ ಒಟ್ಟು ವ್ಯಾಪಾರ ಮೊತ್ತದಲ್ಲಿ ಮೂರನೇ ಸ್ಥಾನಕ್ಕೆ ಏರಿವೆ, ಒಟ್ಟು ಆಸ್ತಿ ಮೌಲ್ಯದಲ್ಲಿ ಆರನೇ ಸ್ಥಾನಗಿಟ್ಟಿಸಿದೆ. ರೂ.100 ಕೋಟಿಗೂ ಹೆಚ್ಚು ಆಸ್ತಿಮೌಲ್ಯವಿರುವ ಒಟ್ಟು 61ಕೈಗಾರಿಕಾ ಗುಂಪುಗಳ ಆಸ್ತಿಮೌಲ್ಯ ರೂ 23990 ಕೋಟಿ, ಅವುಗಳಲ್ಲಿ ಬೃಹತ್ ಗಾತ್ರದ ಹತ್ತು ಗುತ್ತೇದಾರಿ ಗುಂಪುಗಳ ಆಸ್ತಿ ಮೌಲ್ಯ ರೂ. 11650 ಕೋಟಿ! ಗುತ್ತೇದಾರಿ ಗುಂಪುಗಳು ಸರಕಾರಕ್ಕೇ ಸವಾಲು ಹಾಕುತ್ತಿವೆ. ಸಾರ್ವಜನಿಕ ಕ್ಷೇತ್ರವನ್ನು ತಮಗೆ ಬಿಟ್ಟು ಕೊಡಲು ಒತ್ತಾಯಿಸುತ್ತಿವೆ! (ಮನೋರಮಾ: 1987)

★ ಗುತ್ತೇದಾರಿ ಗುಂಪುಗಳು ವಿದೇಶಿ ವಿನಿಮಯಗಳಿಕೆಯನ್ನು ತೆರಿಗೆಗಳನ್ನು ತಪ್ಪಿಸುತ್ತಿವೆ. ಉದಾ. ರಿಲೆಯಾನ್ಸ್: ರೂ. 120 ಕೋಟಿ ಕಿರ್ಲೋಸ್ಕರ್: ರೂ. 6ಕೋಟಿ ಥಾಪರ್: ರೂ 14ಕೋಟಿ ಟಾಟಾ:ರೂ 98 ಲಕ್ಷ ಜರ್ಕೆ ರೂ.1.5 ಕೋಟಿ; ಹಿಂದುಸ್ಥಾನ್ ಕಂಪ್ಯೂಟರ್ಸ್: ರೂ. 3.95 ಕೋಟಿ; ಸೋಮನಿ ಪಿಲ್ಕಿಂಗ್‌ಟನ್; ರೂ. 85 ಲಕ್ಷ, ಗೋಲ್ಡನ್ ಜೋಬೆಕೊ: 13 ಕೋಟಿ; ಕೊಥಾರಿ: ರೂ. 1.54ಕೋಟಿ; ನ್ಯಾಶನಲ್ ಟೋಬೆಕೋ. ರೂ. 75 ಕೋಟಿ; ಬೆಕೆಲೈಟ್ ರೈಲಮ್: ರೂ. 1.15ಕೋಟಿ; ರೋಜರ್ ಎಂಟರ್ ಪ್ರೈಸಸ್: ರೂ. 4 ಕೋಟಿ; ಜಸ್ವಾಲ್; ರೂ.50ಲಕ್ಷ [ಇಲ್ಲೆಸ್ಟ್ರೇಟೆಡ್‌ವೀಕ್ಲಿ: 1984-86 ರ ಸಮೀಕ್ಷೆ].

★ ಲಂಚ, ರುಸುವತ್ತುಗಳು; 1980 ರಿಂದಲೇ ಭಾರತದ ರಕ್ಷಣಾ ಖಾತೆಗೆ ಶಸ್ತ್ರಾಸ್ತ್ರಗಳನ್ನು ಖರೀದಿಸುವಾಗ ಮಧ್ಯವರ್ತಿಗಳನ್ನು ದಳ್ಳಾಳಿಗಳನ್ನು ನೇಮಿಸಬಾರದೆಂದೂ ಅವರಿಗೆ ಯಾವುದೇ ರೀತಿಯ ಕಮಿಶನ್ ಕೊಡಬಾರದೆಂದೂ ಕಾನೂನು ಜಾರಿಯಲ್ಲಿದೆ.

ಬೊಫೋರ್ಸ್ ಹಗರಣ ಇತ್ಯಾದಿ ಅತ್ಯುನ್ನತ ಮಟ್ಟಗಳ ಭ್ರಷ್ಟಾಚಾರಗಳ ಹಿನ್ನೆಲೆಯನ್ನು ವಿವರಿಸುತ್ತಾರೆ.

ಕಾ|| ಆರ್. ಚಂದ್ರ

ಆದರೆ ಪ.ಜರ್ಮನಿಯಿಂದ ರೂ.430 ಕೋಟಿ ಬೆಲೆ ಬಾಳುವ ನಾಲ್ಕು ಜಲಾಂತರ್ಗಾಮಿ ಯುದ್ಧ ನೌಕೆಗಳನ್ನು ಖರೀದಿಸುವಾಗ ಶೇ 7ರ ದರದಲ್ಲಿ ರೂ. 30ಕೋಟಿಯಷ್ಟು ಭಾರತದ ದಲ್ಲಾಳಿ ಸಂಸ್ಥೆಗೆ ಕಮಿಶನ್ ನೀಡಲಾಗಿದೆ ಎಂದು ತಿಳಿದು ಬಂದಿದೆ. ಈ ವ್ಯವಹಾರ1981ರಲ್ಲಿಪ್ರಧಾನಿಇಂದಿರಾ ಗಾಂಧಿ ರಕ್ಷಣಾಮಂತ್ರಿಯಾಗಿದ್ದಾಗ ಪ್ರಾರಂಭವಾಗಿ, 1983ರ ಈಗಿನ ಉಪರಾಷ್ಟ್ರಾಧ್ಯಕ್ಷರ ಆರ್. ವೆಂಕಟರಾಮನ್ ರಕ್ಷಣಾ ಮಂತ್ರಿಯಾಗಿದ್ದಾಗ ಒಪ್ಪಂದಕ್ಕೆ ಸಹಿಹಾಕಲಾಗಿದ್ದು, 1985-1986ರಲ್ಲಿ ಪ್ರಧಾನಿ ರಾಜೀವ್‌ಗಾಂಧಿ ರಕ್ಷಣಾಮಂತ್ರಿಯಾಗಿದ್ದಾಗ ನಾಲ್ಕರಲ್ಲಿಎರಡುಜಲಂತಾರ್ಗಾಮಿಗಳು ಭಾರತಕ್ಕೆ ಬಂದು ಸೇರಿದ್ದು, 1987 ರಲ್ಲಿ ವಿ.ಪಿ. ಸಿಂಗ್ ರಕ್ಷಣಾ ಮಂತ್ರಿಯಾಗಿದ್ದಾಗ, ರೂ. 30 ಕೋಟಿ ಕಮಿಶನ್ ಪಡೆದ ಹಗರಣ ಅವರನ್ನು ಬೆಳಕಿಗೆ ಬಂದು ತನಿಖೆಗೆ ಪ್ರಾರಂಭವಾದ ಕೂಡಲೇ ವಿ.ಪಿ. ಸಿಂಗ್ ಅವರನ್ನು ರಕ್ಷಣಾ ಮಂತ್ರಿ ಪದವಿಯಿಂದ ಉಚ್ಚಾಟಿಸಲಾಯಿತು ! ಆರ್.ವೆಂಕಟರಾಮನ್‌ರನ್ನು ರಾಷ್ಟ್ರಾಧ್ಯಕ್ಷ ಸ್ಥಾನಕ್ಕೆ ಕಾಂಗ್ರೆ ಅಭ್ಯರ್ಥಿಯಾಗಿ ನಾಮಕರಣ ಮಾಡಲಾಗುತ್ತಿದೆ.

★ ಪ್ರಧಾನಿ ರಾಜೀವ್ ಗಾಂಧಿ ರಕ್ಷಣಾ ಮಂತ್ರಿಯಾಗಿದ್ದ ಕಾಲದಲ್ಲಿಯೇ ಸ್ವಿಡನ್‌ನಿಂದ ಭಾರತಕ್ಕೆ ರೂ. 1700ಕೋಟಿ ಮೌಲ್ಯದ ಯುದ್ಧ ತುಪಾಕಿಗಳನ್ನು ಒದಗಿಸಲು ಆದೇಶದ ಕುಖ್ಯಾತ, ಬೋಫೋರ್ಸ್ ಸಂಸ್ಥೆಯು ಭಾರತದ ಉನ್ನತ ರಾಜಕೀಯ ಮತ್ತು ಆಡಳತದ ವ್ಯಕ್ತಿಗಳಿಗೆ ರೂ. 120 ಕೋಟಿಯಷ್ಟು ಲಂಚ ರುಸುವತ್ತು ಕೊಟ್ಟಿದೆ ಎಂದು ಸ್ವಿಡನ್ ರೇಡಿಯೋ ವರದಿ ಮಾಡಿದೆ. ಈ ಕುರಿತು ತನಿಖೆ ನಡೆಸಲು ರಕ್ಷಣಾ ಮಂತ್ರಿಯಾದ ಪ್ರಧಾನಿರಾಜೀವ್‌ಗಾಂಧಿಯೇ ಮೀನ ಮೇಷ ಮಾಡುತ್ತಿದ್ದಾರೆ.

★ ವಿದೇಶಗಳಲ್ಲಿ ಗುಪ್ತ ಖಾತೆಯಲ್ಲಿ 'ಕಪ್ಪು ಹಣ' ಬಚ್ಚಿಡಲಾಗುತ್ತಿದೆ. ಸದ್ಯ ಇಂತಹ ಹಣದ ಮೊತ್ತ ರೂ. 13000 ಕೋಟಿ ಸ್ವಿಡ್ಜರ್‌ಲ್ಯಾಂಡಿನಲ್ಲಿಟ್ಟಿದೇ ರೂ. 13000 ಕೋಟಿ ಎಂದು ತಿಳಿದು ಬಂದಿದೆ. ಈ 'ಕಪ್ಪು ಹಣ' ದ ಒಡೆಯರ ಪತ್ತೆ ಹಚ್ಚಲು ವಿ.ಪಿ. ಸಿಂಗ್ ಅಮೇರಿಕಾದ 'ಫೇರ್ ಫೇಕ್ಸ್' ಗುಪ್ತಚಾರ ಸಂಸ್ಥೆಯನ್ನು ನೇಮಿಸಿ, ಅದರಿಂದ ಪಡೆದ ವಿಶೇಷ ಮಾಹಿತಿಗಳ ಆಧಾರದಲ್ಲಿ ಈ ವರ್ಷದ ಪ್ರಾರಂಭದಲ್ಲಿ ನೂರಾರು ಗಣ್ಯ ವ್ಯಕ್ತಿಗಳಸಂಸ್ಥೆಗಳಆಸ್ತಿದಾಯಗಳನ್ನು ಜಪ್ತಿ ಮಾಡಿಸಲು ತಯಾರಿನಡೆಸುತ್ತಿರುವಂತೆಯೇ ವಿ.ಪಿ.ಸಿಂಗ್‌ರನ್ನು ಅರ್ಥ ಮಂತ್ರಿ ಸ್ಥಾನದಿಂದ ಪದಚ್ಯುತಗೊಳಿಸಲಾಯಿತು! ಅವರ ಖಾತೆಯ ನಿಷ್ಠಾವಂತ ವರಿಷ್ಟ ಅಧಿಕಾರಿ ಭುರೇಲಾರ್‌ರನ್ನು ಬೇರೆ ಗೌಣಖಾತೆಗೆ ವರ್ಗಾಯಿಸಲಾಯಿತು!

★ ಬಂಡವಾಳಶಾಹಿ ವ್ಯವಸ್ಥೆಯು ತೀವ್ರ ಆರ್ಥಿಕ ದುಃಸ್ಥಿತಿಯನ್ನು ಎದುರಿಸುತ್ತಿರುವಾಗ, ಶೀಘ್ರವಾಗಿ ಜೀವನ ಮಟ್ಟವನ್ನು ಕಳೆದುಕೊಳ್ಳುತ್ತಿರುವ ಶ್ರಮಿಕವರ್ಗದ ಉತ್ಪಾದನಾ ಶಕ್ತಿಯು ಕುಂಠಿತವಾಗುವುದು. ನಿಷ್ಕ್ರಿಯೊಜನವಾಗುವುದು. ಭೂಮಾಲಿಕರೇ ಬಂಡವಾಳಶಾಹಿಗಳು ಪರಾನ್ನ ಜೀವಿಗಳಾಗಿ ಪ್ರಾರಂಭದಲ್ಲಿದ್ದ ತಮ್ಮ ಉದ್ಯಮಶೀಲತೆಯನ್ನು ಕಳೆದು ಕೊಂಡು ಹಣದಾಸೆಗೆ 'ಕಪ್ಪುಹಣ' ಸಂಗ್ರಹಿಸುವ ಸುಲಭ ಮಾರ್ಗ ಅನುಸರಿಸುವರು. ಇತ್ತೀಚೆಗೆ ಳಕಿಗೆ ಬಂದ ಭ್ರಷ್ಟಾಚಾರ ಪ್ರಕರಣಗಳು ಸಾಗರದಲ್ಲಿ ಹನಿಗಳು ಮಾತ್ರ, ಪರ್ವತದ ತುದಿಮಾತ್ರ ಬಂಡವಾಳಶಾಹಿಗಳ 'ವೈಯಕ್ತಿಕ' ಮತ್ತು 'ಸಾಮೂಹಿಕ' ಹಿತಾಶಕ್ತಿಗಳ ನಡುವಿನ ತೀವ್ರ ವೈರುದ್ಯಗಳಿಂದಾಗಿ ಇಂತಹ ಭ್ರಷ್ಟಾಚಾರಗಳು ಇನ್ನಷ್ಟು ಬೆಳಕಿಗೆ ಬರಲಿವೆ. ರಾಷ್ಟ್ರಾಧ್ಯಕ್ಷರು ಪ್ರಧಾನ ಮಂತ್ರಿ, ಅರ್ಥ ರಕ್ಷಣಾ ಮಂತ್ರಿಗಳ ನಡುವಿನ ರಾಜಕೀಯ ಹಾಗೂ ಸಂವಿಧಾನಾತ್ಮಕವಾದ ಬಿಕ್ಕಟ್ಟು ಆರ್ಥಿಕ ಬಿಕ್ಕಟ್ಟಿನ ಇನ್ನೊಂದು ಮುಖ. ರಾಜೀವ್‌ಗಾಂಧಿ ವಾದಿಸುತ್ತಿರುವ 'ಅಸ್ಥಿರತೆಯ ಶಕ್ತಿಗಳು' ತಾನು ನಡೆಯುತ್ತಿರುವ ಬಂಡವಾಳಶಾಹಿ ವ್ಯವಸ್ಥೆಯಲ್ಲಿಯೇ ಇದೆ. ಅನುಸರಿಸುತ್ತಿರುವ ಆರ್ಥಿಕ ಧೋರಣೆಯಲ್ಲಿಯೇ ಅಡಕವಾಗಿವೆ.

★ ಸಂಪನ್ಮೂಲಗಳ ಕೊರತೆಯಿರುವ ಭಾರತದ ಆರ್ಥಿಕ ವ್ಯವಸ್ಥೆಯಲ್ಲಿ ರೂ 37000 ಕೋಟಿ ಕನಿಷ್ಟ 'ಕಪ್ಪು ಹಣ' ದಲ್ಲಿ ರೂ 10000 ಕೋಟಿಯಷ್ಟನ್ನಾದರೂ ಸರ್ಕಾರ ತೆರಿಗೆ, ಜುಲುಮಾನಗಳ ಮೂಲಕ ಸಂಗ್ರಹಿಸಿದರೆ, ಲಕ್ಷಾಂತರ ಬಡಜನರಿಗೆ ಉದ್ಯೋಗ, ವಸತಿ, ವಿದ್ಯಾಭ್ಯಾಸ, ಬಟ್ಟೆ, ನೈರ್ಮಲ್ಯ ಕೀಯ ಸೌಲಭ್ಯಗಳನ್ನು ಒದಗಿಸಬಹುದು.ಕಾಂಗ್ರೆ ಸರ್ಕಾರದಿಂದಇದು ಸಾಧ್ಯವೇ ? ಜನಪರವಾದ ಪರ್ಯಾಯ ರಾಜಕೀಯ ಶಕ್ತಿಯಿಂದ, ಪರ್ಯಾಯ ಆರ್ಥಿಕ ಧೋರಣೆಯಿಂದ ಮಾತ್ರ ಇದು ಸಾಧ್ಯ ○

ಭಾರತದಲ್ಲಿ ಆಫ್ರಿಕಾ ಸಂಸ್ಕೃತಿಯ ಪ್ರತಿಬಿಂಬ

ಸಾಂಸ್ಕೃತಿಕ ರಂಗ

ಜಿ. ಎನ್. ಮೋಹನ್

ಕಪ್ಪು ಖಂಡದ ಕುಣಿತಗಳು

ಮೇ 25 'ಆಫ್ರಿಕಾ ದಿನ' ವನ್ನು ಅಲಿಪ್ತ ಕೂಟದ ಪ್ರಮುಖ ರಾಷ್ಟ್ರವಾದ ಭಾರತದಲ್ಲಿ ಅತ್ಯಂತ ಉತ್ಸಾಹದಿಂದ ಆಚರಿಸಲಾಯಿತು. ಆಫ್ರಿಕಾದೊಂದಿಗೆ ನೇರವಾಗಿ ಕೈಕುಲುಕಿ ಅಲ್ಲಿನ ಒಳಗುದಿಗೆ ಸದಾ ಕಣ್ಣಾಗಿಯೇ ಇರುವ ಭಾರತ 1987ನ್ನು ಆಫ್ರಿಕಾ ವರ್ಷವನ್ನಾಗಿ ಆಚರಿಸುತ್ತಿರುವ ಹಿನ್ನೆಲೆಯಲ್ಲಿ ರಾಷ್ಟ್ರದಾದ್ಯಂತ ಹಮ್ಮಿಕೊಂಡ ಕಾರ್ಯಕ್ರಮಗಳು ಗಮನಸೆಳೆದವು.

ಆಫ್ರಿಕಾ ದಿನದ ಅಂಗವಾಗಿ ದೆಹಲಿ, ಕಲ್ಕತ್ತ. ಬಾಂಬೆ, ಬೆಂಗಳೂರಿನಲ್ಲಿ ಆಫ್ರಿಕಾದ ಆರು ದೇಶಗಳ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಏರ್ಪಡಿಸಲಾಗಿತ್ತು.ಜೂ 2ಮತ್ತು3ರಂದು ನಗರದ ಚೌಡಯ್ಯ ಸ್ಮಾರಕ ಭವನದಲ್ಲಿ ನಡೆದ ಈ 'ಆಫ್ರಿಕಾ ಉತ್ಸವ' ಕಗ್ಗತ್ತಲ ಖಂಡದ ಸಾಂಸ್ಕೃತಿಕ ಬದುಕಿನತ್ತ ಕ್ಷಕಿರಣ ಬೀರಿತು.

'ಹಾಡು ಮತ್ತು ಕುಣಿತ ಬದುಕಿನ ಸಂತೋಷದಲ್ಲಿ ಮಡುಗಟ್ಟುತ್ತದೆ. ಈ ಕುಣಿತದ ಕಬ್ಬಗಳು ವಿಶ್ವಭಾಷೆಯೊಂದನ್ನು ನಿರ್ಮಾಣ ಮಾಡುತ್ತದ.ಅವಕ್ಕೆ ಯಾವುದೇ ಅರ್ಥ ಹಚ್ಚುವ ಅಗತ್ಯವಿಲ್ಲ. ಆಫ್ರಿಕಾದ ಲಯ ತನ್ನದೇ ಆದ ಮನಸ್ಸನ್ನು ಕಲಕುವ ಶಕ್ತಿಯನ್ನು ಪಡೆದಿದೆ ಏಕೆಂದರೆ ಆಫ್ರಿಕಾದ ಲಯ ಅಲ್ಲಿನ ದಿನದ ಬದುಕಿನ ಲಯವಲ್ಲದೇ ಮತ್ತೇನೂ ಅಲ್ಲ' ಎಂದು ರಾಜೀವ್ ಗಾಂಧಿ ತಮ್ಮ ಸಂದೇಶದಲ್ಲಿ ಆಫ್ರಿಕಾದ ಬದುಕು ಹಾಗೂ ಕುಣಿತಗಳು ಬೆಸೆದುಕೊಂಡಿರುವುದನ್ನು ಮಾರ್ಮಿಕವಾಗಿ ಹೇಳಿದ್ದಾರೆ.

ಆಫ್ರಿಕಾ ಉತ್ಸವದಲ್ಲಿ ಪ್ರದರ್ಶಿಸಿದ ಕುಣಿತಗಳೆಲ್ಲದರಲ್ಲಿ ಈ ಬದುಕು ಮತ್ತು ಕುಣಿತ ಬೆಸೆದುಕೊಂಡಿರುವ ಬಗೆಯನ್ನು ಕಾಣಬಹುದಿತ್ತು. ದಿನದ ದುಡಿಮೆಯ ಆಯಾಸವನ್ನು ಕಳೆಯಲು ಹುಟ್ಟಿಕೊಂಡ ಕುಣಿತಗಳು ಕ್ರಮೇಣ ಲಯವಾಗತೊಡಗಿತು. ಬುರ್ಕಿನಾ ಫಾಸೋ, ಮೊರಿಷಿಯಸ್, ನೈಜೀರಿಯಾ, ಸೆನೆಗಾಲ್, ಘಾನ,ಇಥಿಯೋಪಿಯಾ ದೇಶಗಳ ಈ ಕುಣಿತದಲ್ಲಿ ಈ ಖಂಡದ ಪ್ರಸ್ತುತ ನೋವಿನ ಬದುಕಲ್ಲದಿದ್ದರೂ ಅದರ ವಾಸನೆ ಬೀರುವ ಕೆಲವು ಪ್ರದರ್ಶನಗಳು ಇದ್ದವು.

ದುಡಿಮೆಗಾರರ ಕುಣಿತದಿಂದ ಹಿಡಿದು, ಜನಾಂಗದ ವಿಧಿಗಳನಲ್ಲದೇ ಹಬ್ಬಹುಣ್ಣಿಮೆಗಳ ಕುಣಿತಗಳು ಆಫ್ರಿಕಾದ ಹಲವು ಸ್ತರಗಳನ್ನು ಬಿಚ್ಚಿಟ್ಟಿತು. ಸೆನೆಗಾಲ್ ತನ್ನ ಕುಣಿತಗಳಲ್ಲಿ ಜನಾಂಗದ ಲೈಂಗಿಕ ವಿಧಿ, ಆಚರಣೆಗಳನ್ನು ಪ್ರದರ್ಶಿಸಿದರೆ ಘಾನ ಸುಗ್ಗಿ ಕುಣಿತವನ್ನು ಪ್ರದರ್ಶಿಸಿತು. ಈ ಮಧ್ಯೆ ಸ್ವಾತಂತ್ರ್ಯ ಹೋರಾಟದಲ್ಲಿ ಮಡಿದ ಯು ಯು ರಾಜನನ್ನು ಕುರಿತು ಮೊರಿಷಿಯಸ್ ಕಥೆ ಹೇಳಿತು. ಇಥಿಯೋಪಿಯದಂತಹ ಹಿಂದುಳಿದ ಖಂಡಗಳಲ್ಲಿ ಈಗ ಪ್ರಾರಂಭವಾಗಿರುವ 'ಕಲಿಸುವ ಹಾಗೂ ಕಲಿಯುವ' ಯೋಜನೆಗಳಂತೆ ಈ ಕುಣಿತಗಳನ್ನು ಕಲಿಸಲು ಹುಟ್ಟಿರುವ ಸರ್ಕಾರಿ ತಂಡಗಳು ಪ್ರದರ್ಶನ ನೀಡಿದವು. ಇವುಗಳೊಂದಿಗೆ ಖ್ಯಾತ ಪಾಪ್‌ಗಾಯಕಿ ನೈಜೀರಿಯಾದ ಒಂಕೇಯಾ ಒಸ್ಬೇನು ಪಾಪ್ ಹಾಡುಗಳನ್ನು ಹಾಡಿದರು.

ಆಫ್ರಿಕಾದ ಕೆಂಡದುಂಡೆಗಳು ಎಂದೇ ಹೆಸರಾದ ಮುಂಚೂಣಿ ರಾಷ್ಟ್ರಗಳಾದ ಜಿಂಬಾಬ್ವೆ, ಜಾಂಬಿಯಾ, ಬೋಟ್ಸ್ವಾನ,ಅಂಗೋಲ ಮುಂತಾದ ತಂಡಗಳು ಇಲ್ಲಿದ್ದು ತಮ್ಮ ನಿಟ್ಟುಸಿರ ಹೋರಾಟವನ್ನು ಹೇಳದಿದ್ದರೂ ಆಫ್ರಿಕಾದ ಬದುಕಿಗೆ ಎರಡು ದಿನಗಳ ಕಾಲವನ್ನು ತೆರೆಯಲು ಈ ಉತ್ಸವ ಅವಕಾಶ ಮಾಡಿಕೊಟ್ಟಿತು.

ಪುಸ್ತಕ ಪರಿಚಯ

ಕಪ್ಪುನಾಡಿನ ಕೆಂಪು ಸೂರ್ಯ

[6ನೇ ಪುಟ ನೋಡಿ]

ಉಚ್ಛ ತಂತ್ರಜ್ಞಾನ ಯಾರದ್ದು ?

ಸೋವಿಯತ್ ದೇಶದ್ದು ಕಳಪೆ ತಂತ್ರಜ್ಞಾನ ಅಮೇರಿಕದಿಂದ ತಂತ್ರಜ್ಞಾನ ಕದ್ದರೇ ಅವರು ಮುದುವರಿಯಲು ಸಾಧ್ಯ ಎಂಬುದು ಅಮೇರಿಕದ ಪ್ರಚಾರ. ಅದಕ್ಕೆ ಕೆನಾಡದ ಒಂದು ಪತ್ರಿಕೆ ನಾರ್ದರ್ನ್ ನೇಬರ್ಸ್ ನೀಡಿದ ಉತ್ತರವನ್ನು ಇಲ್ಲಿ ಪ್ರಕಟಿಸಲಾಗಿದೆ.

ಸಮಾಜವಾದಿ ರಾಷ್ಟ್ರಗಳ ಉನ್ನತ ತಂತ್ರಜ್ಞಾನ ಬಂಡವಾಳಶಾಹಿ ರಾಷ್ಟ್ರಗಳಷ್ಟು ಶ್ರೇಷ್ಠ ಮಟ್ಟದಲ್ಲಿಲ್ಲವೆಂದು ಪಾಶ್ಚಿಮಾತ್ಯ ಸುದ್ಧಿ ಮಾಧ್ಯಮಗಳು ಪದೇ ಪದೇ ಹೇಳುವುದರಲ್ಲಿ ಹೊಸತಲ್ಲ, ಸೋವಿಯತ್‌ಒಕ್ಕೂಟದಲ್ಲಿ ತಯಾರಿಸಲಾದ ಅತ್ಯಾಧುನಿಕ ಯಂತ್ರಗಳನ್ನು ಅಲ್ಲಿ ಸಂಸ್ಕರಿಸಿದ ನವೀನ ತಾಂತ್ರಿಕತೆಯನ್ನು ಅಮೇರಿಕಾ ಸಂಯುಕ್ತ ಸಂಸ್ಥಾನದ ಹಿರಿಯ ಗುತ್ತೇದಾರಿ ಸಂಸ್ಥೆಗಳು ಭಾರೀ ಪ್ರಮಾಣದಲ್ಲಿ ಕೊಂಡುಕೊಳ್ಳುತ್ತಿವೆಯೆಂದು ಅಮೇರಿಕದ ಎಸೋಸಿಯೇಟೆಡ್ ಪ್ರೆಸ್‌ನ ಕಾರ್ಲ್ ಹಾರ್ಟ್‌ಮನ್ ಒಪ್ಪಿಕೊಂಡಿದ್ದಾರೆ.ಇದಕ್ಕಿಂತಲೂ ಹೆಚ್ಚಿನ ಸಾಧನೆಯನ್ನು ಒಪ್ಪಿಕೊಳ್ಳುವುದಕ್ಕೆ ಬಹುಶಃ ಅವರ ಬಿಗುಮಾನ ಅಡ್ಡಿ ಬಂದಿರಬಹುದು. ಹಾಗಾಗಿ ಅವರು ಬಿಟ್ಟದನ್ನು ಕೆನಡಾದಿಂದ ಪ್ರಕಟಿಸಲ್ಪಡುವ 'ನಾರ್ದರ್ನ್ ನೇಬರ್ಸ್' ಪತ್ರಿಕೆ ಪಟ್ಟಿ ಮಾಡಿ ಹೇಳಿದೆ.ಸೋವಿಯತ್‌ಒಕ್ಕೂಟ ತಂತ್ರಜ್ಞಾನದ ಕ್ಷೇತ್ರದಲ್ಲಿ ಸಾಧಿಸಿರುವ ಪ್ರಗತಿಯ ಕುರಿತು ಈ ಪತ್ರಿಕೆ ನೀಡಿದ ಕೆಲವು ಹೋಲಿಕೆಗಳನ್ನು ನೋಡಿ :–

ಕಳೆದ ಐದು ವರ್ಷಗಳಲ್ಲಿ ಸೋವಿಯತ್‌ಒಕ್ಕೂಟವು ಅಮೇರಿಕಾದ ಕಂಪನಿಗಳಿಗೆ ಮಾರಾಟ ಮಾಡಿದ ಪೇಟೆಂಟ್ ರಹದಾರಿಗಳ ಸಂಖ್ಯೆ ಅದು ಅಮೇರಿಕಾದಿಂದ ಕೊಂಡುಕೊಂಡ ಲೈಸನ್ಸ್‌ಗಳಿಗಿಂತ ಮೂರು ಪಟ್ಟು ಜಾಸ್ತಿ.

ಹಲವಾರು ವರ್ಷಗಳಿಂದಲೂ ಪ್ರತಿವರ್ಷ ದಾಖಲೆಯಾಗುತ್ತಿರುವ ಹೊಸ ಕೈಗಾರಿಕಾ ಸಂಶೋಧನೆಗಳಲ್ಲಿ ಅರ್ಧಾಂಶಕ್ಕಿಂತಲೂ ಹೆಚ್ಚು ಸೋವಿಯತ್‌ಒಕ್ಕೂಟದ ಹೆಸರಲ್ಲಿವೆ. ಇದು ಅಮೇರಿಕದಲ್ಲಿ ಆಗುವ ಹೊಸ ಸಂಶೋಧನೆಗಿಂತ ಎರಡುವರೆ ಪಟ್ಟು ಹೆಚ್ಚು.

ತಂತ್ರಜ್ಞಾನದಲ್ಲಿ ಇಟಲಿ ತೀರಾ ಮುಂದುವರಿದಿದೆಯೆನ್ನಲಾಗಿದೆ. ಇದರ ಕಾರಣ ಗೊತ್ತೇ? ಇಟಲಿಯ ಅತ್ಯಂತ ದೊಡ್ಡದಾದ 300 ಕೈಗಾರಿಕಾ ಘಟಕಗಳು ಸೋವಿಯತ್ ಒಕ್ಕೂಟದಲ್ಲಿ ತಯಾರಾದ ಅಧಿಕ ಉತ್ಪಾದನಾ ಶಕ್ತಿಯ 8000 ಯಂತ್ರ ಸಾಮಗ್ರಿಗಳನ್ನು ಬಳಸುತ್ತಿವೆ. ಇಟಲಿ ಸೋವಿಯತ್ ತಂತ್ರಜ್ಞಾನವನ್ನು ಕದ್ದುಕೊಳ್ಳುತ್ತಿದೆಯೆ? ಸರ್ವಥಾ ಇಲ್ಲ. ಅದು ಸೋವಿಯತ್ ತಂತ್ರಜ್ಞಾನವನ್ನು ಯಂತ್ರಸಾಮಗ್ರಿಗಳನ್ನೂ ರಾಜಾರೋಷವಾಗಿ ಕ್ರಯಕೊಟ್ಟು ಪಡಕೊಂಡು ಉಪಯೋಗಿಸುತ್ತಿದೆ.

ಸೋವಿಯತ್‌ಲೋಹ ಶಾಸ್ತ್ರಜ್ಞರು ಸಂಶೋಧಿಸಿದ್ದ 'ಇಲೆಕ್ಟ್ರೋ ಸ್ಲಾಗ್ ವೆಲ್ಡಿಂಗ್' ತಾಂತ್ರಿಕತೆಯನ್ನು ಅಮೇರಿಕಾದ ಸಂಯುಕ್ತ ಸಂಸ್ಥಾನ ಸದ್ದಿಲ್ಲದೆ ಬಳಸಿಕೊಂಡು ಉತ್ತಮ ದರ್ಜೆಯ ಮತ್ತು ಅಗ್ಗದ ಬಂದೂಕು ಕೊಳವೆಗಳನ್ನು ತಯಾರಿಸುತ್ತಿವೆಯೆಂದು ಎಸೋಸಿಯೇಟೆಡ್ ಪ್ರೆಸ್ ವರದಿ ಮಾಡಿದೆ. ಇದೀಗ ರಕ್ಷಣಾ ಕ್ಷೇತ್ರದಲ್ಲಿ ತಂತ್ರಜ್ಞಾನವನ್ನು ಕದಿಯುತ್ತಿರುವವರು ಯಾರು?

ಕದಿಯುವ ಮಾತು ಬಂದಾಗ ವೈದ್ಯಕೀಯ ಕ್ಷೇತ್ರದ ಬಗೆಗೂ ಹೇಳಬೇಕಾಗುತ್ತದೆ. ಸೋವಿಯತ್ ಒಕ್ಕೂಟದ ವಿಜ್ಞಾನಿ ಡಾ|| ಫ್ಯೆದೋರ್‌ಫ್ಯೆದೊರೋವ್ ಅವರು ಮೂವತ್ತು ವರ್ಷಗಳ ಹಿಂದೆ ಸಂಶೋಧಿಸಿದ್ದ 'ಸಮೀಪ ದೃಷ್ಟಿ ಶಸ್ತ್ರಚಿಕಿತ್ಸೆ'ಯ ವಿಧಾನವನ್ನು [ಇಲೆಕ್ಟ್ರೋ ಮ್ಯಾಗ್ನೆಟಿಕ್‌ವಿಧಾನ] ಇದೀಗ ಅಮೇರಿಕಾದಲ್ಲಿ ಬಳಸಿ ಸಾವಿರಾರು ಜನಕ್ಕೆ ದೃಷ್ಟಿದಾನ ನೀಡಲಾಗುತ್ತಿದೆಯಂತೆ· ಆದರೆ ಅಮೇರಿಕದವರು ಹೇಳುವಂತೆ ಇದನ್ನು ಓಹಿಯೋ ವಿಶ್ವವಿದ್ಯಾಲಯದ ಪ್ರೊ.ಚೆನ್‌ಎಂಬುವರು ಇತ್ತೀಚೆಗೆ ಸಂಶೋಧಿಸಿದ್ದಂತೆ! ಓಹಿಯೋದ ಪ್ರೊ. ಚೆನ್ ತನ್ನ ಗ್ರಂಥದಲ್ಲಿ ಡಾ|| ಫ್ಯೆದೋರೋವ್ ಅನರ ಪ್ರಬಂಧದ 3 ರಿಂದ 6ನೇ ಅಧ್ಯಾಯಗಳನ್ನು ಅನಾಮತ್ತಾಗಿ ನಕಲು ಹೊಡೆದಿದ್ದಾರೆ; ಮತ್ತು ಈ ಕಾರಣಕ್ಕಾಗಿಯೇ ಅವರು ತನ್ನ ಪುಸ್ತಕದಲ್ಲಿ ಆಧಾರ ಗ್ರಂಥಗಳ ಪಟ್ಟಿಯನ್ನು ಕೊಡುವ ಧೈರ್ಯ ತೋರಿಸಿಲ್ಲ! ವೈಜ್ಞಾನಿಕ ಸಂಶೋಧನೆಯ ಕ್ಷೇತ್ರದಲ್ಲಿ ಇದೊಂದು ಅಪೂರ್ವ ಸಾಹಸದ ಕಳ್ಳತನ! ಈಗ ಹೇಳಿ, ಸಮಾಜವಾದಿ ರಾಷ್ಟ್ರಗಳ ವಿಜ್ಞಾನಿಗಳಿಗೆ ಇಂತಹ ತಾಂತ್ರಿಕ ಪ್ರಗತಿ ಸಾಧ್ಯವೇ?

ಜಿ. ಎನ್. ಎಲ್. ಎಫ್ ಬಂದ್ ವಿಫಲ

ಜೂನ್ 6ನೇ ತಾರೀಖನಿಂದ, 72 ಗಂಟೆಗಳ ಬಂದ್‌ಗೆ ಕೊಟ್ಟ ಕರೆಯನ್ನು ಯಾರೂ ಕೇಳದಾದರು. ಗೂರ್ಖಾಲ್ಯಾಂಡ್ ಚಳುವಳಿ ಪ್ರಬಲವಾಗಿರುವ ಕರೆಸೌಂಗ್ ಮತ್ತು ಕಾಲಿಂಪಾಂಗನಲ್ಲೇ ಇದು ವಿಫಲವಾಯಿತು. ಪ್ರಥಮ ದಿನದಂದೇ ಬಂದ್ ಫಲಪ್ರದವಾಗಲಿಲ್ಲ. ಬಸ್ಸುಗಳ ಓಡಾಟ ಎಂದಿನಂತಿತ್ತು. ಸರ್ಕಾರೀ ಹಾಗೂ ಖಾಸಗೀ ಆಫೀಸುಗಳು ಎಂದಿನಂತೆ ಕಾರ್ಯವೆಸಗಿದವು. ಜಿ.ಎನ್.ಎಲ್.ಎಫ್. ಬೆದರಿಕೆ ಒಡ್ಡಿದರೂ, ಜನರು ಎಂದಿನಂತೆ ಜಾಡಾಡಿಕೊಂಡು ತಮ್ಮ ತಮ್ಮ ಕೆಲಸಗಳಲ್ಲಿ ಮಗ್ನರಾಗಿದ್ದರು.

ಮೇ 28ರಂದು ಚೂಡ ಮಣ್ಣು ಖಡ್ಗ ಎಂಬ ಜಿ.ಎನ್.ಎಲ್.ಎಫ್.ನ ಮುಖಂಡನನ್ನು ರೌಡಿತನಕ್ಕಾಗಿ ಬಂಧಿಸಲಾಗಿತ್ತು. ಇವನನ್ನು ಬೇಷರತ್ತಾಗಿ ಬಿಡುಗಡೆಗೊಳಿಸಬೇಕೆಂದು ಬಂದ್‌ಗೆ ಕರೆಕೊಡಲಾಗಿತ್ತು. ಬಂದ್ ವಿಫಲವಾಗಿರುವುದು ಮಾತ್ರ ಅಲ್ಲದೇ, ಬಂಧನದಿಂದ ಬಿಡುಗಡೆಗೊಳಿಸಿದರೆ, ಜಿ.ಎನ್.ಎಲ್.ಎಫ್.ನೊಂದಿಗೆ ತನ್ನ ಎಲ್ಲಾ ಸಂಬಂಧ ಕಡಿದುಕೊಳ್ಳುವುದಾಗಿ ಟೂಡಾ ಮಣ್ಣು ಖಡ್ಗ ಹೇಳಿಕೆ ನೀಡಿದ್ದಾನೆ.

ಹೆಂಡಂದಿರಿಂದ ಹೆಂಡದ ಮೇಲೆ ಸಮರ

ಪಶ್ಚಿಮ ಬಂಗಾಳದ ಹಳ್ಳಿಯ ಹೆಂಗಸರು ಹೆಂಡದ ಮೇಲೆ ಹೋರಾಟಕ್ಕಿಳಿದಿದ್ದಾರೆ. ಹಳ್ಳಿಗಳಲ್ಲಿ ಮುಖ್ಯವಾಗಿ ಬುಡಕಟ್ಟು ಜನಾಂಗದ ಹಳ್ಳಿಗಳಲ್ಲಿ ಅಕ್ರಮ ಕಳ್ಳ ಭಟ್ಟಿಯನ್ನು ಮಾರುವ ಒಂದು ದುಷ್ಟ ಗುಂಪೇ ಇದೆ. ಇಲ್ಲಿನ ಜನರು ಇದರಿಂದ ಯಾವ ದುಃಸ್ಥಿತಿಗೆ ಬರತೊಡಗಿದರೆಂದರೆ ಮನೆಯಲ್ಲಿರುವ ಅಡುಗೆ ಪಾತ್ರೆಗಳನ್ನು ಹೆಂಡಕ್ಕಾಗಿ ಮಾರತೊಡಗಿದರು. ಇದನ್ನು ವಿರೋಧಿಸಿದ ಹೆಂಡಂಧಿರನ್ನು, ಮಕ್ಕಳನ್ನು ಥಳಿಸತೊಡಗಿದರು. ಇದರಿಂದ ಕೃದ್ಧರಾದ ಹೆಂಗಸರು ಹೋರಾಟಕ್ಕಿಳಿದಿದ್ದಾರೆ. ಎ.ಐ.ಡಿ.ಡಬ್ಲ್ಯೂ.ಎ. ಹಳ್ಳಿಯ ಪಂಚಾಯತ್, ಡಿ.ವೈ.ಎಫ್.ಐ. ಇವರ ಸಂಘಟನೆಯ ನೇತೃತ್ವದಲ್ಲಿ ಹೋರಾಟ ನಡೆಯುತ್ತಿದೆ. ಹೋರಾಟದ ಸಳಿವನ್ನು ತಿಳಿದ ಕುಡುಕ ಗಂಡಂದಿರು ಹೆಂಗಸರು ಹಳ್ಳಿ ಬಿಟ್ಟು ಹೋಗದಂತೆ ತಡೆಯಲು ಪ್ರಾರಂಭಿಸಿದರು. ತಾವು ಯಾತ್ರೆಗೆ ಹೋಗುತ್ತಿರುವುದಾಗಿ, ಗಂಗಾಸ್ನಾನಕ್ಕಾಗಿ ಹೋಗುತ್ತಿರುವುದಾಗಿ ಸುಳ್ಳು ಹೇಳಿದ ಹೆಂಗಸರು, ಹಳ್ಳಿಯಿಂದ ಜಿಲ್ಲೆಯ ಕೇಂದ್ರ ಪಟ್ಟಣಕ್ಕೆ ಬಂದು ಪೋಲೀಸ್ ಸೂಪರಿನ್‌ಟೆಂಡೆಂಟರ್, ಹಾಗೂ ಎಕ್ಸೈಸ್ ಸುಪರಿಟೆಂಡರನ್ನು ಸಾಮೂಹಿಕವಾಗಿ ಭೇಟಿ ಮಾಡಿದರು. ಕಳ್ಳ ಭಟ್ಟಿಯನ್ನು ಮಾಡುವ ದುಷ್ಟ ಗುಂಡನ್ನು ನಾಶ ಮಾಡಬೇಕೆಂದು ಬೇಡಿಕೆ ಇಟ್ಟರು. ಪಶ್ಚಿಮ ಬಂಗಾಳದ ಹಳ್ಳಿ ಹಳ್ಳಿಗಳಲ್ಲಿ ಈ ಹೋರಾಟ ಪ್ರಾಬಲ್ಯವಾಗುತ್ತಿದೆ. ○

ಜನಾರ್ಧನ್ ಪೂಜಾರಿಯವರ ಸುಳ್ಳು ಆರೋಪ

ರಾಜೀವ್ ಗಾಂಧಿಯವರ ಸರಕಾರವನ್ನು "ಅಸ್ಥಿರಗೊಳಿಸುವ" ಅಪಾಯಕಾರಿ ಕಾರ್ಯಕ ಮವನ್ನು ವಿರೋಧ ಪಕ್ಷಗಳು ನಡೆಸುತ್ತಿವೆ. ಎಂಬ ಆರೋಪವನ್ನು ಕೇಂದ್ರದ ರಾಜ್ಯ ಅರ್ಥ ಮಂತ್ರಿ ಜನಾರ್ಧನ ಪೂಜಾರಿಯವರು ಹುಬ್ಬಳ್ಳಿಯಲ್ಲಿ ಹೊರಿಸಿರುವುದು ಸತ್ಯಕ್ಕೆ ದೂರವಾಗಿದೆಂದೂ, ಅದು ಅಪ್ಪಟ ಸುಳ್ಳೆಂದೂ ತಾ 8ರಂದು ಹೊಸಪೇಟೆಯಲ್ಲಿ ಕರೆದಿದ್ದ ಪತ್ರಿಕಾಗೋಷ್ಟಿಯಲ್ಲಿ ಹೇಳಿದರು. ರಾ ೀವ್‌ಗಾಂಧಿಯವರ ಸರ್ಕಾರದ ಅಸ್ತಿರತೆಗೆ ಅವರ ಆರ್ಥಿಕ ಧೋರಣೆ ಹಾಗೆಯೇ ತಮ್ಮ ಅಧಿಕಾರ ಉಳಿಸುವ ಸಲುವಾಗಿ ನುತೀಯ ಶಕ್ತಿಗಳೊಡನೆ ಮಾಡಿಕೊಂಡ ಒಪ್ಪಂದವೇ ಕಾರಣವೆಂದೂ ಛಿದ್ರಕಾರಿ ಭಯೋತ್ಪಾದಕ ಶಕ್ತಿಗಳನ್ನೆದುರಿಸುವುದರಲ್ಲಿ ಕೇಂದ್ರ ಸರ್ಕಾರ ತೋರಿಸುತ್ತಿರುವ ಅಸಾಮರ್ಥ್ಯ. ಮತ್ತೊಂದು ಕಾರಣವೆಂದೂ ಆರೋಪಿಸಿದ್ದಾರೆ. ದೊಡ್ಡ ಕೈಗಾರಿಕೋದ್ಯಮಿಗಳು ಸಾವಿರಾರು ಕೋಟಿ ರೂಪಾಯಿ ಬ್ಯಾಂಕುಗಳ ಸಾಲ ಮರು ಪಾವತಿ ಮಾಡದೆ ಮುಳುಗಿಸುತ್ತಿರುವಾಗ, ಬಡವರಿಗೆ ಹಂಚುವ ಸಾಲದಿಂದ ಬ್ಯಾಂಕಗಳಿಗೆ ಹಾನಿಯಾಗುತ್ತದೆಂದು ವಿನಾಕಾರಣ ವಿರೋಧ ಪಕ್ಷಗಳು ಬೊಬ್ಬಿಡುತ್ತಿವೆಂದು ಜನಾರ್ಧನ ಪೂಜಾರಿಯವರು ಹೇಳಿರುವುದನ್ನು ಖಂಡಿಸುತ್ತಾ ದೊಡ್ಡ ಕೈಗಾರಿಕೋದ್ಯಮಿಗಳ ಸಾಲ ವಸೂಲಿ ಮಾಡಬಾರದೆಂದು ಆದೇಶ ನೀಡುವವರು ಜನಾರ್ಧನ ಪೂಜಾರಿ ಮತ್ತು ಅವರ ಮೇಲಿನ ಮಂತ್ರಿಗಳೆಂಬುದಕ್ಕೆ ಸಾಕ್ಷಾಧಾರಗಳಿವೆ ಎಂದು ಹೇಳಿದ ಉಪಾಧ್ಯಾಯರು ಜನಾರ್ಧನ ಪೂಜಾರಿಯವರು ಸಾಲ ಹಂಚುವ ಕ್ರಮದಿಂದ ದೇಶಕ್ಕಾಗಲಿ, ಜನರಿಗಾಗಲಿ ಯಾವದೇ ಲಾಭ ವಿಲ್ಲೆಂದು ಹೇಳಿದರು. ○

ಮೇ ದಿನಾಚರಣೆ

ರಾಯಚೂರು ಜಿಲ್ಲೆಯ ಕುಷ್ಟಗಿಯಲ್ಲಿ ಮೇ ದಿನವನ್ನು ವಿಜ್ರಂಭಣೆಯಿಂದ ಆಚರಿಸಲಾಯಿತು. ಕೆ.ಇ.ಬಿ. ನೌಕರರ ಸಂಘ, ಪೌರ ಕಾರ್ಮಿಕರ ಸಂಘ, ದಿನಕೂಲಿ ನೌಕರರ ಸಂಘ, ಕೃಷಿಕೂಲಿಕಾರರ ಸಂಘ, ಕ.ಪ್ರಾ. ರೈತ ಸಂಘ, ಡಿ ವೈ. ಎಫ್. ಐ. ಬ್ಯಾಂಕ್‌ನೌಕರರ ಸಂಘಗಳು ಸಂಯುಕ್ತವಾಗಿ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದವು.

ಸಮಾರಂಭದ ಕೊನೆಯಲ್ಲಿ ಸಮುದಾಯ ತಂಡದವರು (ಸಿಂಧನೂರು) ಯುದ್ಧ ವಿರೋಧಿ ಶಾಂತಿಪರ, ಕ್ರಾಂತಿ ಗೀತೆಗಳನ್ನು ಹಾಡಿದರು.

ವಿದ್ಯುತ್ ದರ ಏರಿಕೆ ವಿರುದ್ಧ ಎಲ್ಲೆಡೆ ಪ್ರತಿಭಟನೆ

ಉಡುಪಿ

ಕರ್ನಾಟಕ ಸರ್ಕಾರವು ಇತ್ತೀಚೆಗೆ ವಿದ್ಯುಚ್ಛಕ್ತಿ ದರಗಳನ್ನು ಶೇ.25ರಷ್ಟು ಹೆಚ್ಚಿಸಿ ಗೃಹ ಬಳಕೆದಾರರು, ರೈತರು ಮೊದಲಾದವರಿಗೆ ತೊಂದರೆಯುಂಟು ಮಾಡಿರುವುದನ್ನು ವಿರೋಧಿಸಿ ಉಡುಪಿಯಲ್ಲಿ ಕೆ.ಇ.ಬಿ. ಕಛೇರಿಯ ಮುಂದೆ ಜೂನ್ 1ರಂದು ಸಾಮೂಹಿಕ ಸತ್ಯಾಗ್ರಹ ನಡೆಯಿತು. ಬೆಳಿಗ್ಗೆ 11 ಗಂಟೆಯಿಂದ ಸಂಜೆಯವರೆಗೆ ಸತ್ಯಾಗ್ರಹ ನಡೆಯಿತು. ನಂತರ ಕೆ.ಇ.ಬಿ. ಎಕ್ಸಿಕ್ಯೂಟಿವ್ ಎಂಜಿನಿಯರ್ ಮೂಲಕ ರಾಜ್ಯದ ಮುಖ್ಯಮಂತ್ರಿಗೆ ವಿದ್ಯುತ್ ದರ ಏರಿಕೆಯನ್ನು ಹಿಂತೆಗೆದುಕೊಳ್ಳುವಂತೆ, ಲೋ ವೋಲ್ಟೇಜ್ ಸಮಸ್ಯೆಯನ್ನು ಪರಿಹರಿಸುವಂತೆ, ದುಬಾರಿ ದಂಡ ವಸೂಲಿಯನ್ನು ನಿಲ್ಲಿಸುವಂತೆ ಒತ್ತಾಯಿಸುವ ಮನವಿಯನ್ನು ನೀಡಲಾಯಿತು.

ಕಾರ್ಯಕ್ರಮದ ನೇತೃತ್ವವನ್ನು ಸಿ.ಪಿ.ಐ.(ಎಂ)ನ ಉಡುಪಿ ತಾಲ್ಲೂಕು ಸಮಿತಿ ವಹಿಸಿತ್ತು.

ಹಾಸನ

ರಾಜ್ಯ ಸರ್ಕಾರವು ವಿದ್ಯುಚ್ಛಕ್ತಿ ದರವನ್ನು ವಿಪರೀತ ಏರಿಸಿ ಎಲ್ಲಾ ಜನ ವಿಭಾಗಗಳಿಗೂ ತೊಂದರೆಯುಂಟು ಮಾಡಿರುವುದನ್ನು ಪ್ರತಿಭಟಿಸಿ ಜೂನ್ 9ರಂದು ಸಿ.ಪಿ.ಐ. (ಎಂ)ನ ನೇತೃತ್ವದಲ್ಲಿ ಹಾಸನದ ಕೆ.ಇ.ಬಿ. ಕಚೇರಿಯೆದುರು ಧರಣಿ ಸತ್ಯಾಗ್ರಹ ನಡೆಸಲಾಯಿತು ನಂತರ ನಡೆದ ಸಭೆಯನ್ನುದ್ದೇಶಿಸಿ ಮಾತನಾಡಿದ ಮುಖಂಡರುಗಳು ವಿದ್ಯುತ್ ಇಲಾಖೆಯಲ್ಲಿನ ಭ್ರಷ್ಟಾಚಾರ, ವಿದ್ಯುತ್ ಪ್ರವಾಹದಲ್ಲಿರುವಾಗ ನಷ್ಟವನ್ನು ತಡೆಯದೆ ವಿದ್ಯುತ್ ಉತ್ಪಾದನಾ ಹೆಚ್ಚಳಕ್ಕೆ ಯೋಜನಾಬದ್ಧ ಕಾರ್ಯ ಕ್ರಮವನ್ನು ರೂಪಿಸದೆ ಪದೇ ಪದೇ ವಿದ್ಯುತ್ ದರವನ್ನು ಏರಿಸುತ್ತಿರುವ ಸರ್ಕಾರದ ಕ್ರಮವನ್ನು ಖಂಡಿಸಿದರು. ಕೂಡಲೇ ಏರಿಸಿರುವ ದರಗಳನ್ನು ಇಳಿಸಬೇಕೆಂದು ಆಗ್ರಹಪಡಿಸಿದರು.

ತುಮಕೂರು

ತುಮಕೂರು ಜಿಲ್ಲಾ ಸಮಿತಿ ಇತ್ತೀಚೆಗೆ ಸಭೆ ಸೇರಿ ತಮಿಳುನಾಡು ಸಿ.ಪಿ.ಐ.(ಎಂ) ಶಾಸಕಾಂಗ ಪಕ್ಷದ ಉಪನಾಯಕರೂ ಮತ್ತು ಸಿಐಟಿಯು ನಾಯಕರೂ ಆದ ಕಾ.ವಿ.ಪಿ.ಚಿಂತನ್‌ರವರ ಅಕಾಲಮರಣಕ್ಕೂ, ಪಂಜಾಬಿನ ಸಿ.ಪಿ.ಐ. ನಾಯಕರೂ,ಮಾಜಿಶಾಸರೂ ಆದ ಕಾ||ಮುಖನ್‌ಸಿಂಗ್ ತರ್ಸಿಕ್ಕಾರವರ ಉಗ್ರಗಾಮಿಗಳಿಂದಾದ ಮರಣಕ್ಕೂ 2 ನಿಮಿಷಗಳ ಮೌನ ಆಚರಿಸಿ ಸಂತಾಪ ಸೂಚಿಸಿತು.

2. ಇತ್ತೀಚೆಗೆ ಕರ್ನಾಟಕ ರಾಜ್ಯ ಸರ್ಕಾರ ವಿದ್ಯುಚ್ಛಕ್ತಿ, ಹಾಲು, ಬಸ್ಸು ಮತ್ತು ನೀರಿನ ದರಗಳನ್ನು ಏರಿಸಿರುವುದನ್ನು ಖಂಡಿಸಿ ಜನತಾ ಸರ್ಕಾರವು ತಕ್ಷಣವೇ ಈ ದರಗಳನ್ನು ಪುನರ್ ವಿಮರ್ಶಿಸಿ ಹೆಚ್ಚಿನ ದರಗಳನ್ನು ಇಳಿಸದೇ ಹೋದಲ್ಲಿ ತೀವ್ರತರವಾದ ಚಳುವಳಿಗಳನ್ನು ಜಿಲ್ಲಾದಾದ್ಯಂತ ನಡೆಸಲು ತೀರ್ಮಾನಿಸಿತು. ○

ಐಕ್ಯರಂಗಕ್ಕೆ ದೇಣಿಗೆ

ಶ್ರೀ ಎಂ. ಶ್ರೀರಾಮ ಗುಪ್ತಾ, ಮಾಜಿ ನಗರ ಸಭೆ ಸದಸ್ಯರು ಪಾವಗಡ, ತುಮಕೂರು ಜಿಲ್ಲೆ ಅವರು ಐಕ್ಯರಂಗಕ್ಕೆ ರೂ.500 ದೇಣಿಗೆ ನೀಡಿದ್ದಾರೆ. ಅವರಿಗೆ ಅಭಿನಂದನೆಗಳು.

ವಿದ್ಯುತ್ ದರ ಏರಿಕೆ ಹಿಂದಿನ ರಾಜಕೀಯ

ಜಿ. ಎನ್. ನಾಗರಾಜ್

ಮೇ 2 ರಂದು ಜನತಾ ಸರ್ಕಾರ ಕರ್ನಾಟಕದ ಜನತೆಗೆ ತನ್ನನ್ನು ಬಹುಮತದಿಂದ ಆಯ್ಕೆ ಮಾಡಿದಕ್ಕೆ ಸರಿಯಾದ ವಿದ್ಯುತ್ ಷಾಕ್ ನೀಡಿತು. 170 ಕೋಟಿ ರೂಗಳನ್ನು ಈ ಮೂಲಕ ಸಂಗ್ರಹಿಸಲು ಪ್ರಯತ್ನಿಸಿದರೆ ಒಂದು ತಿಂಗಳ ನಂತರ ಆಂಧ್ರ ಸರ್ಕಾರ ವಿದ್ಯುತ್ ದರಗಳನ್ನು ಗಣನೀಯವಾಗಿ ಏರಿಸಿ 180 ಕೋಟಿ ರೂಗಳ ಹೊರೆಯನ್ನು ಆಂಧ್ರದ ಜನರ ಮೇಲೆ ಹೇರಿದೆ. ಇತ್ತೀಚೆಗೆ ಕೇರಳ ಸರ್ಕಾರ ಸಾಮಾನ್ಯ ಜನರ ಮೇಲೆ ಹೊರೆಯನ್ನು ಹೇರುವುದನ್ನು ತಪ್ಪಿಸಿದರೂ ಹೈಟೆನ್ಶನ್ ವಿದ್ಯುತ್ ಬಳಕೆದಾರರ ಮೇಲೆ ಮಾತ್ರ ಹೆಚ್ಚಿನ ದರಗಳನ್ನು ವಿಧಿಸಲು ಪ್ರಯತ್ನಿಸಿತು. ವಿದ್ಯುತ್ ದರ ಏರಿಕೆಯಲ್ಲಿ ವಿವಿಧ ಸರಕಾರಗಳ ಜನಪರ-ಜನವಿರೋಧಿ ದೃಷ್ಟಿಗಳು ಸ್ಪಷ್ಟವಾಗಿ ಕಂಡರೂ ಈ ಎಲ್ಲಾ ರಾಜ್ಯ ಸರ್ಕಾರಗಳು ಹೀಗೇಕೆ ವಿದ್ಯುತ್ ದರಗಳನ್ನು ಏರಿಸಿ ಜನರ ಮೇಲೆ ಹೊರೆಯನ್ನು ಏಕೆ ಹೇರಲು ಪ್ರಯತ್ನಿಸುತ್ತಿವೆ.

ಒಬ್ಬೊಬ್ಬರದು ಒಂದೊಂದು ಕಾರಣ

ಇದು ಎಲ್ಲರೂ ಆಳವಾಗಿ ವಿವೇಚಿಸಬೇಕಾದ ಸಂಗತಿ. ಆಗ ಮಾತ್ರ ಈ ನಮ್ಮನ್ನಾಳುವ ಸರ್ಕಾರಗಳ ವರ್ಗ ಸ್ವರೂಪ ಸ್ಪಷ್ಟವಾಗಿ ಅರ್ಥವಾದೀತು. "ಘನ" ಕರ್ನಾಟಕ ಸರ್ಕಾರ ಮಾನ್ಯ ಸಚಿವರುಗಳು ಹೇಳುತ್ತಿರುವುದಾದರೂ ಏನು? ವಿದ್ಯುತ್ ಹಾಗೂ ಕೈಗಾರಿಕಾ ಮಂತ್ರಿ ಜೆ. ಎಚ್. ಪಟೇಲರು ಕೆ.ಇ.ಬಿ.ಗೆ ಬಹಳ ನಷ್ಟವಾಗುತ್ತಿದೆ ಅದನ್ನು ತುಂಬಲು ಬೇರೆ ಮಾರ್ಗವೇ ಇಲ್ಲ ಬೆಲೆ ಏರಿಸಲೇಬೇಕಾಗಿದೆ ಎಂದು ಒಮ್ಮೆ ಹೇಳಿದರೆ ಮತ್ತೊಮ್ಮೆ ಕೇಂದ್ರ ಸರ್ಕಾರದ ಕಾನೂನಿನ ಪ್ರಕಾರ ಪ್ರತಿ ವಿದ್ಯುತ್ ಮಂಡಳಿಯೂ ಶೇ 3ರಷ್ಟು ಲಾಭ ತೋರಿಸಲೇಬೇಕು ಎಂದು ವಿಧಿಸಿದೆ. ಅದಕ್ಕಾಗಿ ಈ ವಿದ್ಯುತ್ ದರ ಏರಿಕೆ ಮಾಡಬೇಕಾಯಿತೆಂದು. ಹೇಳಿದ್ದಾರೆ. ಜನತಾ ಸರ್ಕಾರದಲ್ಲಿ ಎಲ್ಲಾ ಖಾತೆಗಳ ವಿಷಯದ ಬಗ್ಗೆಯೂ ಅಧಿಕೃತ ವಕ್ತಾರನಂತೆ ಮಾತನಾಡು ವಿದ್ಯಾ ಸಚಿವ ಡಾ. ಆಳ್ವಾ ಮೂರು ವರ್ಷ ಕರ್ನಾಟಕವನ್ನು ಕಾಡಿದ ಬರಗಾಲದಿಂದಾದ ನಷ್ಟವನ್ನು ಎದುರಿಸುವುದಕ್ಕಾಗಿ ಈ ದರ ಏರಿಕೆ ಮಾಡಬೇಕಾಯಿತು ಎಂದಿದ್ದಾರೆ. ಹೊಸದಾಗಿ ವಿದ್ಯುತ್ ಇಲಾಖೆಯ ರಾಜ್ಯ ಸಚಿವರಾಗಿ ನೇಮಕವಾದ ಲಕ್ಷ್ಮೀನರಸಿಂಹಯ್ಯನವರೂ ಸೇರಿ ಎಲ್ಲರೂ ಒಮ್ಮತವಾಗಿ ಹೇಳಿದ ವಿಚಾರವೆಂದರೆ–ಸಿ.ಪಿ.ಐ. (ಎಂ) ಸಿ.ಪಿ.ಐ. ಸೇರಿ ಎಲ್ಲಾ ರಾಜಕೀಯ ಪಕ್ಷಗಳು, ಸಾಮಾನ್ಯ ಜನರ ವಿವಿಧ ಸಂಘಟನೆಗಳೂ, ಕೈಗಾರಿಕೋದ್ಯಮಿಗಳು, ಕರ್ನಾಟಕದ ವಾಣಿಜ್ಯ, ಕೈಗಾರಿಕೋದ್ಯಮಿಗಳ ಛೇಂಬರ್ಸ್‌ಗಳೂ ಪ್ರತಿಭಟಿಸಿದರೂ "ವಿದ್ಯುತ್ ದರ ಏರಿಕೆಯನ್ನು ಪುನರ್ ಪರಿಶೀಲಿಸುವುದು ಸಾಧ್ಯವೇ ಇಲ್ಲ. ಇದು ಮಾತ್ರ ಖಂಡಿತವಾದ ಮಾತು" ಎಂದು.

ಜನವರಿಯಲ್ಲಿಯೇ ನಿರ್ಣಯ

ಒಮ್ಮೊಮ್ಮೆ ಒಂದೊಂದು ಕಾರಣ ನೀಡುತ್ತಿರುವ ಇವರ ಮಾತನ್ನು ಎಷ್ಟು ನಂಬಬಹುದು? ಈ ವರ್ಷ ಮಂಡಿಸಿದ ಬಜೆಟ್‌ನಲ್ಲಿ ಈ ಬಗ್ಗೆ ಯಾವ ಸೂಚನೆ ನೀಡದೆ, ವಿಧಾನ ಮಂಡಲದ ಅಧಿವೇಶನಗಳು ಮುಗಿದ ನಂತರ ಇದನ್ನು ಜನರ ಮೇಲೆ ಹೇರಲು ಕರ್ನಾಟಕ ಹಾಗೂ ಆಂಧ್ರದ ಸರ್ಕಾರಗಳು ಪ್ರಯತ್ನಿಸಿದ್ದೇಕೆ? ಇದು ಪ್ರಶ್ನೆ. (ಕೇರಳ ಸರ್ಕಾರ ವಿಧಾನ ಮಂಡಲದಲ್ಲಿಯೇ ಬಜೆಟ್‌ನಲ್ಲಿಯೇ ವಿದ್ಯುತ್‌ದರ ಏರಿಕೆಯ ಸೂಚನೆಯನ್ನು ಸೇರಿಸಿಯೇ ಮಂಡಿಸಿತೆಂಬುದನ್ನು ಇಲ್ಲಿ ಗಮನಿಸಬೇಕು.)

ದರ ಏರಿಕೆಯ ಹಿಂದಿನ ನಿಜವಾದ ಹೂರಣವನ್ನು ಇವರ್ಯಾರೂ ಬಯಲು ಮಾಡಲಿಲ್ಲ. ಜನವರಿ 15ರಂದೇ ಕೇಂದ್ರ ಸರ್ಕಾರ ನಡೆಸಿದ ಎಲ್ಲಾ ರಾಜ್ಯಗಳ ವಿದ್ಯುತ್ ಸಚಿವರ ಸಮ್ಮೇಳನದಲ್ಲಿಯೇ ಈ ಬಗ್ಗೆ ನಿರ್ಣಯ ಕೈಗೊಳ್ಳಲಾಗಿತ್ತು. ಎಂಬುದನ್ನು ಇವರಾರೂ ಹೇಳಲಿಲ್ಲ. ಆ ಸಮ್ಮೇಳನದಲ್ಲಿ ರಾಜ್ಯಗಳ ವಿದ್ಯುತ್ ಸಚಿವರುಗಳನ್ನುದ್ದೇಶಿಸಿ ಮಾತನಾಡಿದ ಪ್ರಧಾನಿ ರಾಜೀವ್ ಗಾಂಧಿಯವರು "7ನೇ ಯೋಜನೆಯಲ್ಲಿ ವಿದ್ಯುತ್ ಮೂಲದಿಂದ 9000 ಕೋಟಿ ರೂ.ಗಳ ಸಂಪನ್ಮೂಲ ಸಂಗ್ರಹವನ್ನು ದೇಶ ನಿರೀಕ್ಷಿಸುತ್ತಿದೆ. ಆದರೆ ಅದಕ್ಕೆ ಬದಲಾಗಿ ವಿದ್ಯುತ್ ಮಂಡಳಿಗಳಿಂದ ಈ ಯೋಜನಾ ಅವಧಿಯಲ್ಲಿ 4000 ಕೋಟಿ ರೂ.ನಷ್ಟವಾಗುವಂತೆ ಕಾಣುತ್ತಿದೆ." ಎಂದು ಟೀಕಿಸಿ ವಿದ್ಯುತ್ ಉತ್ಪಾದನೆಯನ್ನು ಖಾಸಗಿಯವರಿಗೆ ಒಪ್ಪಿಸುವ ಮಾತನ್ನಾಡಿದರೆ ಅದೇ ಸಭೆಯಲ್ಲಿದ್ದ, ಕೇಂದ್ರ ಸರ್ಕಾರದ ಶಕ್ತಿ ಮೂಲಗಳ ಸಚಿವ ವಸಂತ ಸಾಠೆಯವರು "ವಿದ್ಯುತ್ ಮಂಡಳಿಗಳನ್ನು ವಾಣಿಜ್ಯೋದ್ದಿಮೆಗಳೆಂದು ಪರಿಗಣಿಸಿ ತಮಗೆ ತಗಲುವ ಪೂರ್ಣವೆಚ್ಚವನ್ನು ಬಳಕೆದಾರರಿಗೆ ವಿಧಿಸಲು ಅವಕಾಶ ನೀಡಬೇಕು. ಅದರಲ್ಲಿಯೂ ಕೃಷಿಯಲ್ಲಿನ ಬಳಕೆದಾರರಿಗೆ ಯಾವುದೇ ವಿನಾಯಿತಿ ನೀಡಬಾರದು ಆಗ ಮಾತ್ರ ಇವು ಲಾಭದಾಯಕವಾಗಿ ನಡೆಯಲು ಸಾಧ್ಯ" ವೆಂದಿದ್ದರು.

ರಾಜ್ಯ ಬಜೆಟ್‌ನಲ್ಲಿ ಕೊರತೆ

ಜನವರಿಯಲ್ಲೇ ಕೇಂದ್ರ ಸರ್ಕಾರ ಸೂಚನೆ ನೀಡಿದ್ದರೆ, ರಾಜ್ಯ ಸರ್ಕಾರ ಬಹಳ ಅಪರೋಕ್ಷ ರೀತಿಯಲ್ಲಿ ಸೂಚನೆ ನೀಡಿತ್ತು. ಕರ್ನಾಟಕ ಸರ್ಕಾರ ಫೆ.27 ರಂದು ಮಂಡಿಸಿದ ಬಜೆಟ್‌ನಲ್ಲಿ 146 ಕೋಟಿ ರೂ.ಗಳಷ್ಟು ಕರಭಾರವನ್ನು ಕಾರ್ಮಿಕರು, ರೈತರ ಮೇಲೆ ಯಾವುದೇ ಮುಲಾಜಿಲ್ಲದೆ ಹೇರಿದ ನಂತರವೂ 148 ಕೋಟಿ ರೂ.ಗಳಷ್ಟು ಕೊರತೆ ತೋರಿಸಿದ್ದರು. ಈ ಕೊರತೆಯನ್ನು ತುಂಬುವುದು ಹೇಗೆ ಎಂಬ ಬಗ್ಗೆ ಒಂದೇ ಒಂದು ಸಣ್ಣ ಸೂಚನೆಯೂ ಕೊಟ್ಟಿರಲಿಲ್ಲ.

ಈ ಅಗಾಧ ಪ್ರಮಾಣದ ಕೊರತೆಯನ್ನು ತುಂಬುವುದು ಹೇಗೆ? ಕೇಂದ್ರ ಸರ್ಕಾರ ಎಷ್ಟು ದೊಡ್ಡ ಪ್ರಮಾಣದ ಕೊರತೆಯನ್ನು ತೋರಿಸಿದರೂ ಅದಕ್ಕೇನೂ ಚಿಂತೆಯಿಲ್ಲ. ರಿಸರ್ವ್ ಬ್ಯಾಂಕ್‌ಗೆ ಆದೇಶ ನೀಡಿದರೆ ಸಾಕು ನೋಟುಗಳು ಮುದ್ರಣವಾಗಿ ಹರಿದು ಸರ್ಕಾರದ ಬೊಕ್ಕಸವನ್ನು ತುಂಬುತ್ತದೆ. ಆದರೆ ರಾಜ್ಯ ಸರ್ಕಾರಗಳಿಗೆ ಇಂತಹ ಅವಕಾಶ ಇಲ್ಲ. ಸ್ವಾತಂತ್ರ್ಯ ನಂತರದಿಂದ 1985ರ ವರೆಗೂ ಅನೇಕ ರಾಜ್ಯ ಸರ್ಕಾರಗಳು ಕೊರತೆ ಬಜೆಟ್ ಮಂಡಿಸಿದ್ದಾವೆ. ಅದಕ್ಕೆ ರಿಸರ್ವ್ ಬ್ಯಾಂಕ್‌ನಿಂದ ಹಣವನ್ನೂ ಪಡೆದಿದ್ದಾವೆ. ಹೀಗೆ ರಾಜ್ಯ ಸರ್ಕಾರಗಳು ಹಣವನ್ನು ಪಡೆಯುವುದಕ್ಕೆ "ಓವರ್ ಡ್ರ್ಯಾಫ್ಟ್" ಎಂದು ಕರೆಯುತ್ತಿದ್ದರು. ಆದರೆ 1985ರಿಂದ ರಾಜ್ಯ ಸರ್ಕಾರಗಳಿಗಿದ್ದ ಈ ಸೌಲಭ್ಯವನ್ನು ಕೇಂದ್ರ ಸರ್ಕಾರ ಕಿತ್ತುಕೊಂಡಿತು. ಇನ್ನು ಮುಂದೆ ಯಾವುವೇ ಓವರ್‌ಡ್ರ್ಯಾಫ್ಟ್ ನೀಡಬಾರದೆಂದು ರಿಸರ್ವ್‌ಬ್ಯಾಂಕ್‌ಗೆ ಸೂಚನೆಯಿತ್ತಿತು. ಇದರ ಪರಿಣಾಮ ರಾಜ್ಯ ಸರ್ಕಾರಗಳು ಯಾವುದೇ ರೀತಿಯಲ್ಲಿ ಕೊರತೆ ಬಜೆಟ್ ಮಂಡಿಸಿದರೂ ಅದನ್ನು ತಾವೇ ತುಂಬಿಕೊಳ್ಳಬೇಕು.

ಸಿ.ಪಿ.ಐ.[ಎಂ] ಹಾಗೂ ಸಿ.ಪಿ.ಐ. ಬೆಂಗಳೂರು ಜಿಲ್ಲಾ ಘಟಕಗಳು ವಿದ್ಯುತ್ ದರ ಏರಿಕೆ ಬಗ್ಗೆ ಜೂನ್ 26 ರಂದು ವಿಧಾನಸೌಧ ಪಿಕೇಟಿಂಗ್ ಮಾಡಲು ತೀರ್ಮಾನಿಸಿವೆ. ಈ ಹಿನ್ನೆಲೆಯಲ್ಲಿ ವಿದ್ಯುತ್ ದರ ಏರಿಕೆಯ ಹಿಂದಿನ ರಾಜಕೀಯವನ್ನು ವಿವರಿಸಲಾಗಿದೆ.

ಕೊರತೆ ಬಜೆಟ್ ತುಂಬಲು

ರಾಜ್ಯಗಳ ಕೊರತೆ ಬಜೆಟ್‌ಅನ್ನು ತುಂಬಿಕೊಳ್ಳುವುದು ಹೇಗೆ? ಇದಕ್ಕೆ ಬಹಳ "ಸುಲಭ"ವಾದ ಮಾರ್ಗವನ್ನೂ ಕೇಂದ್ರ ಸರ್ಕಾರವೇ ಸೂಚಿಸಿತು. ಅಂದಿನ ಅರ್ಥ ಮಂತ್ರಿ ಲೋಕಸಭೆಯಲ್ಲಿ ಓವರ್‌ಡ್ರ್ಯಾಫ್ಟ್ ನಿರಾಕರಣೆಯ ಸೂಚನೆ ಮಂಡಿಸುತ್ತಾ ಉದುರಿಸಿದ ಆಣಿ ಮುತ್ತುಗಳವು. ರಾಜ್ಯ ಸರ್ಕಾರಗಳು ತಮ್ಮ ಆದಾಯವನ್ನು ಸರಿತೂಗಿಸಿಕೊಳ್ಳಲು ಓವರ್‌ಡ್ರ್ಯಾಫ್ಟ್‌ಗೆ ಬದಲಾಗಿ ತಮ್ಮ ಸಂಪನ್ಮೂಲವನ್ನೇ ರೂಢಿಸಿಕೊಳ್ಳಬೇಕು. ಅವರ ನಿಯಂತ್ರಣದಲ್ಲಿ ಸಾರಿಗೆಯಿದೆ, ವಿದ್ಯುಚ್ಛಕ್ತಿ ಮಂಡಳಿಗಳಿವೆ ಅವುಗಳ ದರವನ್ನು ಏರಿಸಿ ತಮ್ಮ ಬಜೆಟ್ ಕೊರತೆಯನ್ನು ತುಂಬಿಕೊಳ್ಳಲಿ. ಇಲ್ಲವಾದರೆ ಯೋಜನೇತರ ವೆಚ್ಚ ಕಡಿಮೆ ಮಾಡಿಕೊಳ್ಳಲಿ (ಅಂದರೆ ತನ್ನ ನೌಕರರ ಸಂಬಳ ಸಾರಿಗೆಯಲ್ಲಿ ಕಡಿತ ಮಾಡಲಿ.)

ಕೇಂದ್ರ ಸರ್ಕಾರಕ್ಕೆ ಈ ಆದೇಶ ನೀಡಿದವರು ವಿಶ್ವಬ್ಯಾಂಕ್ ಅದನ್ನು ತಾನು ಚಾಚೂ ತಪ್ಪದೆ ಅನುಸರಿಸುತ್ತಾ ಅದೇ ಸಲಹೆಯನ್ನು ರಾಜ್ಯ ಸರ್ಕಾರಗಳಿಗೂ ನೀಡಿತು. ಅದನ್ನು ಎಡರಂಗದ ನೇತೃತ್ವದ ಸರ್ಕಾರಗಳು ಹೊರತಾಗಿ ಎಲ್ಲಾ ಸರ್ಕಾರಗಳು–ಅವು ಕಾಂಗ್ರೆಸ್ ಇರಲಿ ಕಾಂಗ್ರೆಸ್ಸೇತರವಿರಲಿ ವಿಧೇಯತೆಯಿಂದ ಅನುಸರಿಸುತ್ತಿವೆ. ಈ ರೀತಿ ಜನತಾ ಸರ್ಕಾರವೂ ವಿಧೇಯತೆಯಿಂದ ಕೇಂದ್ರ ಸರ್ಕಾರದ, ಸೂಚನೆಯನ್ನು ಅನುಸರಿಸಿದುದರ ಫಲವೇ ರಾಜ್ಯದ ಜನರ ಮೇಲೆ 130 ಕೋಟಿ ರೂ. ಭಾರ. ರೈತರು, ಬಡವರು, ಸಾಹುಕಾರರೆನ್ನದೆ ಎಲ್ಲರಿಗೂ ಭಾರಹೇರಿದ್ದು.

ವಿಶ್ವಬ್ಯಾಂಕ್ ಸಾಲ

ಇತ್ತೀಚೆಗೆ ತಾನೇ, ವಿದ್ಯುತ್ ದರಗಳನ್ನು ಏರಿಸಿದ ಬೆನ್ನ ಹಿಂದೆಯೇ ಒಂದು ಪತ್ರಿಕಾ ಪ್ರಕಟನೆ ಎಲ್ಲರ ಗಮನಕ್ಕೆ ಬಂದಿದೆ. ಕೆ.ಪಿ.ಸಿ. ಹಾಗೂ ಕೆ.ಇ.ಬಿ.ಗೆ ವಿದ್ಯುತ್ ಉತ್ಪಾದನೆ ಹೆಚ್ಚಿಸಲು ವಿಶ್ವಬ್ಯಾಂಕ್ 500 ಕೋಟಿ ರೂ.ಗಳಷ್ಟು ಸಾಲ ನೀಡಲಿದೆ. ಕೆ.ಇ.ಬಿ.ಗೆ ವಿದ್ಯುತ್ ತಂತಿಗಳನ್ನು ಹಾಕಲು ಈ ಸಾಲ ನೆರವಾಗಲಿದೆ. ಈ ಸಂಗತಿ ಕೇವಲ ಕಾಕತಾಳೀಯವಲ್ಲ ಎಂಬುದು ಈಗಾಗಲೇ ಅನೇಕರು ತಿಳಿದ ವಿಷಯ. ಸುಮಾರು ಮೂರು ನಾಲ್ಕು ತಿಂಗಳಿಂದಲೇ ಕೇಂದ್ರ ಸರ್ಕಾರ ಹಾಗೂ ರಾಜ್ಯ ಸರ್ಕಾರಗಳೊಡನೆ ನಡೆಯುತ್ತಿದ್ದ ಈ ಸಂಧಾನ ವಿದ್ಯುತ್ ದರಗಳನ್ನು ಏರಿಸಿದ ಮೇಲೆಯೇ ಯಶಸ್ವಿಯಾದದ್ದು ಸಾಲದ ಒಪ್ಪಂದಕ್ಕೆ ಸಹಿಬಿದ್ದದ್ದು.

ನಿಮ್ಮ ರಾಜ್ಯದ ಜನರನ್ನು ಕಿತ್ತು ತಿಂದರೇ, ಕಿತ್ತು ತಿಂದಾದರೂ ಈ ಎರಡು ಕೆ.ಇ.ಬಿ. ಹಾಗೂ ಕೆ.ಪಿ.ಸಿ. ಗಳನ್ನು- ಮಂಡಳಿಗಳನ್ನು ಲಾಭದಾಯಕವಾಗಿಸಿದರೇ ನಮ್ಮ ಸಾಲ ಎಂಬ ಷರತ್ತಿಗೆ ಬಲಿಬಿದ್ದೇ ಜನತಾ ಸರ್ಕಾರ ನಮ್ಮ ಕಿಸೆಯನ್ನು ಕತ್ತರಿಸುವ ಯೋಜನೆ ಹಾಕಿತು ಎಂಬುದನ್ನು ಮರೆಯಬಾರದು.

ಕೆ.ಇ.ಬಿ.ಗೆ ನಷ್ಟ ಇತ್ಯಾದಿ ನೆಪಗಳೆಲ್ಲಾ ಕೇವಲ ನೆಪ. ಏಕೆಂದರೆ ಮನೆಗಳಿಗೆ ದೀಪಕ್ಕಾಗಿ ಅಥವಾ ಅಡಿಗೆಗಾಗಿ ವಿದ್ಯುತ್ ನೀಡಿದ್ದರಿಂದ ಎಂದೂ ಕೆ.ಇ.ಬಿ.ಗೆ ಲಾಭ ಮಾಡಿಕೊಳ್ಳಲು ಸಾಧ್ಯವಾಗಿಲ್ಲ. ಕೈಗಾರಿಕೋದ್ದಿಮೆಗಳ ವಿಷಯದಲ್ಲಿಯೂ ಹಿಂದೆ ಅನೇಕ ಬಾರಿ ಕೆ.ಇ.ಬಿ. ತಾನು ನಷ್ಟಮಾಡಿಕೊಂಡು ಅತಿ ಅಗ್ಗದ ವಿದ್ಯುತ್‌ನೀಡಿ ಉದ್ಯಮಿಗಳನ್ನು ಆಕರ್ಷಿಸುತ್ತಿದ್ದುದು ಇಷ್ಟು ಬೇಗ ಮರೆತು ಹೋಯಿತೆ?

ಮನೆಗಳಿಗೆ ವಿದ್ಯುದ್ದೀಪಕ್ಕೆ ಹಾಕಿದ ದರ ಬಿಲ್ ಬರೆಯಲು, ವಸೂಲಿ ಮಾಡಲು ತಗುಲುವ ವೆಚ್ಚಕ್ಕೆ ಕೂಡ ಸಾಲುವುದಿಲ್ಲ. ವಿದ್ಯುತ್‌ನ ವೆಚ್ಚವಂತೂ ಪಕ್ಕಕ್ಕಿರಲಿ. ಗ್ರಾಮೀಣ ಮನೆಗಳಿಗೆ ಹೋಲಿಸಿದರೆ ಮೀಟರ್ ಹಾಕುವ ವೆಚ್ಚ ಬಿಲ್ ನೀಡುವ ವೆಚ್ಚವನ್ನು ಭರಿಸುವುದಕ್ಕೆ ಬದಲಾಗಿ ಮುಫತ್ತಾಗಿ ವಿದ್ಯುತ್ ನೀಡಿದ್ದಾರೆ. ವಿದ್ಯುತ್ ಮಂಡಳಿಗೆ ಲಾಭವೇ ಹೊರತು ನಷ್ಟವಾಗುವುದಿಲ್ಲ ಏಕೆಂದರೆ ಮೀಟರ್‌ನ ವೆಚ್ಚ ಬಿಲ್ ಕಲೆಕ್ಟರ್‌ನ ವೆಚ್ಚ ಉಳಿಯುತ್ತದೆ. ಆದುದರಿಂದ ಎಲ್ಲಾ ಗ್ರಾಮೀಣ ಮನೆಗಳಿಗೂ ಕೇವಲ ವಿದ್ಯುದ್ದೀಪಕ್ಕಾಗಿ ಮುಫತ್ತಾಗಿ ಯಾಕೆ ವಿದ್ಯುತ್ ನೀಡಬಾರದು ಎಂಬ ಪ್ರಸ್ತಾಪ ಸರಕಾರದ ಬಳಿಯಿರುವಾಗಲೇ ವಿದ್ಯುತ್ ದರ ಏರಿಸಲಾಗಿದೆ.

ಅದೇ ರೀತಿಯಲ್ಲಿಯೆ ವಿದ್ಯುತ್ ಚಾಲಿತ ನೀರಾವರಿ ಪಂಪ್‌ಗಳದೂ ಸಹ. ನೀರಾವರಿ ಮೀಟರ್‌ಗೆ ಬದಲಾಗಿ ವಾರ್ಷಿಕವಾಗಿ ಎಚ್.ಪಿ. ಆಧಾರದ ಮೇಲೆ ವಿದ್ಯುತ್ ದರವಿಧಿಸಿದಾಗ ಇದು ಸರ್ಕಾರಕ್ಕೆ ಬಹಳ ನಷ್ಟದ ವಿಷಯ ಆದರೂ ಇದನ್ನು ರೈತರಿಗೆ ಉಪಕಾರ ಮಾಡುವುದಕ್ಕೆಂದು ಮಾಡುತ್ತಿದ್ದೇನೆ ಎಂದು ಗುಂಡುರಾವ್‌ರವರು ಅಭಿನಯಿಸಿದರೂ ಒಳಗುಟ್ಟೇನೆಂದರೆ ಮೀಟರ್ ಮೂಲಕ ಸಂಗ್ರಹಿಸಲಾಗುತ್ತಿದುದಕ್ಕಿಂತ ಎರಡು ಕೋಟಿ ರೂ ಹೆಚ್ಚು ಹಣ ಸಂಗ್ರಹಿಸಲಾಯಿತು ಎಂಬುದು.

ಹೀಗೆ ಸಾಮಾನ್ಯ ಜನರಿಗೆ ವಿದ್ಯುದ್ದೀಪಕ್ಕಾಗಿ ಹಾಗೂ ರೈತರಿಗೆ ನೀರಾವರಿಗಾಗಿ ಅತಿ ಕಡಿಮೆ ದರದಲ್ಲಿ ವಿದ್ಯುತ್ ನೀಡುವ ಸಾಧ್ಯತೆಯಿದ್ದೂ ಈ ರೀತಿ ಸರ್ಕಾರ ಅವರ ಮೇಲೆ ಭಾರ ಹೇರಿದ್ದೇಕೆ? ಇದರ ಹಿಂದಿನ ನಿಜವಾದ ಕಾರಣವನ್ನು ಹೇಳುವುದಿಲ್ಲವೇಕೆ? ಎರಡಕ್ಕೂ ಒಂದೇ ಉತ್ತರ ವಿಶ್ವಬ್ಯಾಂಕ್ ಒತ್ತಡ ಎಂದು ಸಾಲ ತೆಗೆದುಕೊಳ್ಳುವುದರ ಪರಿಣಾಮ ಮುಂದೆ ಏನಾದರೂ ಆಗಲಿ ಈಗಂತೂ ರುಚಿಯಾಗಿದೆಯಲ್ಲ ಆದುದರಿಂದ ಅದರ ಬಗ್ಗೆ ಜನತಾ ಸರ್ಕಾರ ಬಾಯಿಬಿಡುತ್ತಿಲ್ಲ. ಕೇಂದ್ರ ಸರ್ಕಾರದ ಒತ್ತಡದ ಬಗ್ಗೆ ಕೂಡ ಗಟ್ಟಿಯಾಗಿ ಹೇಳುತ್ತಿಲ್ಲ.

ಪರಿಣಾಮಗಳು

ನಗರ ಪ್ರದೇಶ

1. ಈ ಹಠಾತ್ ವಿದ್ಯುತ್‌ದರ ಏರಿಕೆಯ ಪರಿಣಾಮವೇನು ? ಸಾರ್ವತ್ರಿಕವಾಗಿ ಈಗಾಗಲೇ ಏರಿರುವ ಬೆಲೆಗಳ ಜೊತೆಗೆ ಈ ಬೆಲೆ ಏರಿಕೆಯೂ ಸೇರಿ ದುಡಿಯುವ ಜನತೆ ಇನ್ನಷ್ಟು ಬಡವರಾಗುವುದು ಒಂದೆಡೆ.

2. ಕೈಗಾರಿಕೋದ್ದಿಮೆಗಳು ಮುಖ್ಯವಾಗಿ ಸಣ್ಣ ಕೈಗಾರಿಕೋದ್ಯಮಿಗಳು ಸಾವಿರಾರು, ತಮಷ್ಟಕ್ಕೆ ತಾವೇ ಮುಚ್ಚಿ ಹೋಗುತ್ತಿರುವ ಸಮಯದಲ್ಲಿ ಸಣ್ಣ ಕಾರ್ಮಿಕರು ಬೀದಿಪಾಲಾಗುವುದಕ್ಕೆ ಈ ಉದ್ದಿಮೆದಾರರೂ ಕೂಡ ತಾವು ನಿರ್ಗತಿಕರಾಗುವುದಕ್ಕೆ ಕಾರಣವಾಗುತ್ತದೆ. ಹೊಸ ಕಾರ್ಖಾನೆಗಳು ಆರಂಭವಾಗುವುದಕ್ಕೆ ತೊಡಕ್ಕಾಗುತ್ತದೆ.

3. ಸೌದೆ ಇತ್ಯಾದಿಗಳ ಅಭಾವದಿಂದ ಅಡಿಗೆ ಮೊದಲಾದ ಉಪಯೋಗಗಳಿಗಾಗಿ ವಿದ್ಯುತ್ ಅನ್ನು ಬಳಸುತ್ತಿ ವಿಭಾಗಗಳು ಅದನ್ನು ಕೈಬಿಡಬೇಕಾಗುತ್ತದೆ.

[6ನೇ ಪುಟ ನೋಡಿ]

ರಾಜೀವ್ ಸರಕಾರದ ಬಗ್ಗೆ ಸೋವಿಯೆತ್ ಕಮ್ಯುನಿಸ್ಟ್ ನಿಲುವು ಹಾಗೂ ಸಿ. ಪಿ. ಐ. (ಎಂ)

ಪ್ರಾವ್ದಾದಲ್ಲಿ ವರದಿಯಾದ ವೇಲೆ ಸೋವಿಯತ್ ಕಮ್ಯುನಿಸ್ಟ್ ಪಕ್ಷದ ಕೇಂದ್ರ ಸಮಿತಿ ಕಾರ್ಯದರ್ಶಿಗಳಲ್ಲಿ ಒಬ್ಬರಾದ ಡೊಬ್ರಿನಿನ್ ಎಂಬುವವರು ಭಾರತಕ್ಕೆ ಭೇಟಿ ನೀಡಿದ್ದರು. ಪ್ರಧಾನಿ–ಆಡಳಿತ ಪಕ್ಷದ ಮುಖಂಡರುಗಳನ್ನು ಭೇಟಿ ಮಾಡಿದ್ದರು. ಭಾರತದ ಎರಡು ಕಮ್ಯುನಿಸ್ಟ್ ಪಕ್ಷಗಳ ನಾಯಕರೊಡನೆ ಸಹ ಚರ್ಚಿಸಿದ್ದರು. ಮಾರ್ಕ್ಸ್‌ವಾದಿ ಕಮ್ಯುನಿಸ್ಟ್‌ಪಕ್ಷವು ಅವರೊಂದಿಗೆ ನಡೆಸಿದ ಮಾತುಕತೆಯ ಸಾರಾಂಶವನ್ನು ಇಲ್ಲಿ ವಿವರಿಸುತ್ತೇನೆ.

ಪ್ರಾವ್ದಾ ಪತ್ರಿಕೆಯಲ್ಲಿ ವರದಿಯಾಗಿರುವಂತೆಯೇ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷಕ್ಕೆ ಕೂಡ ಭಾರತದ ಪ್ರಜಾಪ್ರಭುತ್ವ ಗಂಡಾಂತರದಲ್ಲಿರುವಂತೆ ಕಾಣುತ್ತದೆ. ವಿಜಯವಾಡ ಕಲ್ಕತ್ತಾ, ಪಕ್ಷದ ಸಮಾವೇಶದಲ್ಲಿ ಅಂಗೀಕರಿಸಿದ ರಾಜಕೀಯ ವರದಿಯ ನಂತರ ಕಳೆದ ಎಪ್ರಿಲ್‌ನಲ್ಲಿ ನಡೆದ ಕೇಂದ್ರ ಸಮಿತಿಯಲ್ಲಿಯೂ ಕೂಡ ಈ ಕುರಿತು ಚರ್ಚಿಸಲಾಗಿದೆ. ಶ್ರೀಮತಿ ಇಂದಿರಾ ಗಾಂಧಿಯವರ ಹತ್ಯೆನಡೆದ ಸಂದರ್ಭದಲ್ಲಿ ಇದ್ದಂತಹ ಗಂಭೀರ ರಾಜಕೀಯ ಪರಿಸ್ಥಿತಿ ಪರಿಣಾಮ ಇದೆಂದು ಪಕ್ಷದ ಅಭಿಪ್ರಾಯವಾಗಿದೆ. ಭಾರತದ ಸುತ್ತಲ ದೇಶಗಳಾದ ಪಾಕಿಸ್ತಾನ,ಬಾಂಗ್ಲಾ,ಶ್ರೀಲಂಕಾ ಮುಂತಾದ ರಾಷ್ಟ್ರಗಳಲ್ಲಿ ರಹಸ್ಯಕೂಟ ರಚಿಸಿಕೊಂಡು ಭಯೋತ್ಪಾದಕ, ಕೊಲೆ, ಸುಲಿಗೆಯನ್ನು ಸಂಘಟಿಸಲು ಅಮೇರಿಕನ್ ನೇತೃತ್ವದ ಸಾಮ್ರಾಜ್ಯಶಾಹಿಗಳು ಪ್ರಯತ್ನಿಸುತ್ತಿದ್ದಾರೆ. ಇದಕ್ಕೆ ಹಿನ್ನೆಲೆಯಾಗಿ ಲಿಯಾಕತ'ಅಲಿಖಾನ್, ಮುಜಿಬುರ್ ರಹಮಾನ್, ಭಂಡಾರ ನಾಯಕೆ ಇವರುಗಳ ಕೊಲೆಯಾಯಿತು.ಅದೇ ರೀತಿ ಶ್ರೀಮತಿ ಇಂದಿರಾ ಗಾಂಧಿಯವರ ಕೊಲೆ ಕೂಡ ಇದರ ಒಂದು ಅಂಗವೆಂದು ಪಕ್ಷವು [ಸಿ.ಪಿ.ಐ.(ಎಂ)] ಅಭಿಪ್ರಾಯ ಪಟ್ಟಿದೆ. ಇದಾದ ನಂತರ ಪರಿಸ್ಥಿತಿ ಇನ್ನೂ ವಿಷಮಗೊಂಡಿದೆ. ಸಾಮ್ರಾಜ್ಯಶಾಹಿಗಳು ಎಲ್ಲಾ ರೀತಿಯ ಪಿತೂರಿಗಳನ್ನು ಭಾರತದಲ್ಲಿ ನಡೆಸುತ್ತಿದ್ದಾರೆ. ಈ ವಿಷಯದಲ್ಲಿ ಭಾರತದ ಬಂಡವಾಳಶಾಹಿ ಪಕ್ಷಗಳೊಂದಿಗೆ ಭಾರತದ ಕಮ್ಯುನಿಸ್ಟ್ ಪಕ್ಷಕ್ಕೆ ತೀವ್ರವಾದ ಭಿನ್ನಾಭಿಪ್ರಾಯವಿದೆ.

ಸಾಮ್ರಾಜ್ಯಶಾಹಿಗಳು ಭಾರತದಲ್ಲಿ ಪಿತೂರಿ ನಡೆಸುತ್ತಿರುವುದು ನಿಜವಲ್ಲವೆಂದು ಬಂಡವಾಳಶಾಹೀ ವಿರೋಧ ಪಕ್ಷಗಳ ಅಭಿಪ್ರಾಯ. ಆದರೆ ಸಾಮ್ರಾಜ್ಯಶಾಹಿಗಳು ಪಿತೂರಿ ನಡೆಸುತ್ತಿರುವುದು ನಿಜ ಎಂದು ಹಿಂದೆಯೇ ಶ್ರೀಮತಿ ಇಂದಿರಾ ಗಾಂಧಿಯವರು ಹೇಳಿದರು. ಈಗ ರಾಜೀವ್‌ಗಾಂಧಿಯವರೂ ಅದನ್ನೇ ಹೇಳುತ್ತಿದ್ದಾರೆ. ಇದು ಕೇವಲ ಅಪಪ್ರಚಾರ ಎಂಬುದಾಗಿ ಬಂಡವಾಳಶಾಹಿ ವಿರೋಧಿ ಪಕ್ಷಗಳು ಹೇಳುತ್ತಿವೆ. ಈ ಪಕ್ಷಗಳ ಇಂಥ ಧೋರಣೆ ಸಾಮ್ರಾಜ್ಯಶಾಹಿಗಳನ್ನು ಬೆಂಬಲಿಸುವಂತಹುದೆಂದು ಕಮ್ಯುನಿಸ್ಟರು ಅಭಿಪ್ರಾಯ ಪಡುತ್ತಾರೆ ಅಮೇರಿಕದ ನೇತೃತ್ವದ ಸಾಮ್ರಾಜ್ಯಶಾಹೀ ಪಿತೂರಿಯ ಅಪಾಯವನ್ನು ತಡೆಯಲು ಕಾಂಗ್ರೆಸ್(ಐ) ಸರ್ಕಾರಕ್ಕೆ ಸಾಧ್ಯವಿದೆಯೇ? ಅಥವಾ ಇದರ ಬಗ್ಗೆ ಸ್ಪಷ್ಟವಾದ ಅರಿವು ಸರ್ಕಾರಕ್ಕಿದೆಯೇ? ಎಂಬುದು ಕಮ್ಯುನಿಸ್ಟರಿಗೆ ಸಂದೇಹಾಸ್ಪದವಾಗಿದೆ. ಸಾಮ್ರಾಜ್ಯಶಾಹಿಗಳು ತಮ್ಮ ಪಿತೂರಿಯನ್ನು ಮುಂದುವರಿಸಿ ಬೆಳೆಸಲು ಫಲವತ್ತಾದ ಭೂಮಿಯನ್ನು ಕಾಂಗ್ರೆಸ್ ಸರ್ಕಾರ ಒದಗಿಸುತ್ತಿದೆ ಎಂದು ಕಮ್ಯುನಿಸ್ಟರು ಅಭಿಪ್ರಾಯ ಪಡುತ್ತಾರೆ. ಕಾಂಗ್ರೆಸರ್ಕಾರ ಅನುಸರಿಸುತ್ತಿರುವ ತಪ್ಪು ಹಾದಿಯಿಂದಾಗಿ ಸಾಮ್ರಾಜ್ಯಶಾಹಿಗಳು ಯಾವುದೇ ಅಡೆತಡೆಯಿಲ್ಲದೆ ವಿಚ್ಛಿದ್ರಕಾರಿ ಕೆಲಸದಲ್ಲಿ ತೊಡಗಿರುವಾಗ ಸರ್ಕಾರ ಅದರ ವಿರುದ್ಧ ಕ್ರಮ ತೆಗೆದುಕೊಳ್ಳುವ ಸಂದರ್ಭದಲ್ಲಿ ಕಮ್ಯುನಿಸ್ಟರು ಸರ್ಕಾರಕ್ಕೆ ಬೆಂಬಲ ನೀಡುತ್ತಾರೆ ಭಾರತದ ರಾಜಕೀಯದಲ್ಲಿ ಸಾಮ್ರಾಜ್ಯಶಾಹಿಗಳು ಮಧ್ಯ ಪ್ರವೇಶಿಸುವ ಪ್ರಯತ್ನವನ್ನು ವಿಫಲಗೊಳಿಸಲು ಸರ್ಕಾರ ತನ್ನ ರಾಜಕೀಯ ಧೋರಣೆಯನ್ನು ಪೂರ್ಣವಾಗಿ ಬದಲಾಯಿಸಿಕೊಳ್ಳಬೇಕಾಗುತ್ತದೆಂದು ಕಮ್ಯುನಿಸ್ಟರು ಒತ್ತಿ ಹೇಳುತ್ತಾರೆ.

ವಿದೇಶಾಂಗ ನೀತಿಯನ್ನು ಆದಷ್ಟು ಸರಿಯಾದ ರೀತಿಯಲ್ಲಿ ಸರ್ಕಾರ ಅನುಸರಿಸುತ್ತಿದೆ. ತೃತೀಯ ಜಗತ್ತಿನ ಇತರ ದೇಶಗಳಂತೆಯೇ ಭಾರತವೂ ಕೂಡ ಅಲಿಪ್ತ ನೀತಿಯನ್ನು ಅನುಸರಿಸುತ್ತಿದೆ. ಅಣ್ವಸ್ತ್ರ ವಿರೋಧ, ಯುದ್ಧ ವಿರೋಧ ಮತ್ತು ಸಮಾಜವಾದಿ ದೇಶಗಳೊಂದಿಗೆ ಸೌಹಾರ್ದತೆ ಇದು ಜಾಗತಿಕ ಸಾಮ್ರಾಜ್ಯಶಾಹಿಗಳ ಮುನ್ನಡೆಗೆ ಪ್ರಬಲವಾದ ಪೆಟ್ಟು ಕೊಡುತ್ತದೆ. ಈ ವಿಷಯದಲ್ಲಿ ಭಾರತದ ಕಮ್ಯುನಿಸ್ಟರು ಸರ್ಕಾರದೊಡನೆ ಪೂರ್ಣವಾಗಿ ಸಹಕರಿಸುತ್ತಾರೆ.

ಆದರೆ ಸರ್ಕಾರದ ವಿದೇಶಾಂಗ ರಾಜಕೀಯ ಧೋರಣೆಯನ್ನು ಆರ್ಥಿಕ ಧೋರಣೆಗಳೊಂದಿಗೆ ಹೋಲಿಸಲಾಗುವುದಿಲ್ಲ. ವಿದೇಶಾಂಗ ನೀತಿಯ ರಾಜಕೀಯ ಅಂಶದಲ್ಲಿ ಸರ್ಕಾರದ ಧೋರಣೆ ಸಾಮ್ರಾಜ್ಯಶಾಹಿಗಳಿಗೆ ವಿರೋಧವಾಗಿದೆ. ಆದರೆ ಆರ್ಥಿಕ ಕ್ಷೇತ್ರದಲ್ಲಿ ಬಹುರಾಷ್ಟ್ರೀಯ ಗುತ್ತೇದಾರಿ ಹಾಗೂ ವಿಶ್ವ ಬ್ಯಾಂಕ್ ಮತ್ತು ಐ.ಎಂ.ಎಫ್.ಗಳ ಸಹಾಯದಿಂದ ಭಾರತದ ಅರ್ಥವ್ಯವಸ್ಥೆಯನ್ನು ಉತ್ತಮಗೊಳಿಸಬಹುದೆಂಬ ಸರ್ಕಾರದ ನೀತಿಯಿಂದಾಗಿ ಭಾರತದ ಆರ್ಥಿಕತೆ ಸಾಮ್ರಾಜ್ಯಶಾಹಿಗಳ ಕಪಿಮುಷ್ಟಿಗೆ ಸಿಲುಕಿಕೊಳ್ಳುತ್ತಿದೆ. ಆದ್ದರಿಂದ ಸರ್ಕಾರದ ವಿದೇಶಾಂಗ ನೀತಿಯನ್ನು ಬೆಂಬಲಿಸಿದರೂ ಕೂಡ ಸರ್ಕಾರದ ಆರ್ಥಿಕ ನೀತಿಯನ್ನು ಕಮ್ಯುನಿಸ್ಟರು ಪ್ರಬಲವಾಗಿ ವಿರೋಧಿಸುತ್ತಾರೆ.

ಸರ್ಕಾರದ ಆರ್ಥಿಕ ನೀತಿಯಿಂದಾಗಿ ಬಂಡವಾಳಶಾಹಿಗಳು ಹೆಚ್ಚುಶ್ರೀಮಂತರಾಗುತ್ತಾ ಬಡವರನ್ನು ದೋಚುವುದರಿಂದ ಕೋಟ್ಯಾಂತರ ಜನರು ಅತೃಪ್ತಗೊಂಡಿದ್ದಾರೆ. ಇದು ವಿಚ್ಛಿದ್ರಕಾರೀ ಶಕ್ತಿಗಳು,ಪ್ರತ್ಯೇಕತಾವಾದ, ಪ್ರಾದೇಶಿಕವಾದ, ಕೋಮುವಾದ ಹೆಚ್ಚಾಗಿ ಬೆಳೆಯಲು ಕಾರಣವಾಗಿದೆ.

ಪಕ್ಷದ ಕೇರಳ ವಾರ ಪತ್ರಿಕೆ "ಚಿಂತಾ"ದಲ್ಲಿ ಬಂದ ಆಸಕ್ತಿಕರ ಪ್ರಶ್ನೆಗಳಿಗೆ ಉತ್ತರಿಸುತ್ತಾರೆ ಕಾ. ಇ. ಎಂ. ಎಸ್'.

ಪ್ರಶ್ನೆ 1.

ಭಾರತದ ಪ್ರಜಾಪ್ರಭುತ್ವ ಗಂಡಾಂತರದಲ್ಲಿಯೆಂದು 'ಪ್ರಾವ್ದಾ' ಪತ್ರಿಕೆ ವರದಿ ಮಾಡಿದೆಯೆಂಬ ಸುದ್ದಿಯನ್ನು ಪತ್ರಿಕೆಯೊಂದರಲ್ಲಿ ಓದಿದೆ. ಪ್ರಜಾಪ್ರಭುತ್ವವನ್ನು ಬಲಪಡಿಸಲು ಪ್ರಧಾನಿ ರಾಜೀವ್‌ಗಾಂಧಿಯವರಿಗೆ ಎಲ್ಲಾ ಜನ ವಿಭಾಗಗಳೂ ಬೆಂಬಲ ನೀಡಬೇಕೆಂದು ಪ್ರಾವ್ದಾ'ಪತ್ರಿಕೆ ಅಭಿಪ್ರಾಯ ವ್ಯಕ್ತಪಡಿಸಿರುವುದಾಗಿ ವರದಿಯಾಗಿದೆ. ಆದರೆ ಬೋಫೋರ್ಸ್ ಪ್ರಶ್ನೆ, ಫೇರ್ ಫಾಕ್ಸ್ ಹಗರಣ, ಪ್ರಧಾನಿ ಮತ್ತು ರಾಷ್ಟ್ರಪತಿಗಳ ನಡುವಿನ ಭಿನ್ನಾಭಿಪ್ರಾಯ ಮತ್ತು ಗುಂಪುಗಾರಿಕೆಗಳಿಂದಾಗಿ ಕಾಂಗ್ರೆ ಪಕ್ಷಕ್ಕೆ ಭಾರೀ ಹೊಡೆತ ಬಿದ್ದಿರುವ ಈ ಸಂದರ್ಭದಲ್ಲೇ ವಿರೋಧ ಪಕ್ಷಗಳ ಸಮಾವೇಶ ನಡೆದಿದೆ. 'ಪ್ರಾವ್ದಾ'ವರದಿಯಲ್ಲಿ ವ್ಯಕ್ತವಾಗಿರುವಂತೆ ಭಾರತದ ಪ್ರಜಾಪ್ರಭುತ್ವ ಅಪಾಯದಲ್ಲಿದೆಯೆಂದು ಸಿ. ಪಿ. ಐ.[ಎಂ]ಗೆ ಅನ್ನಿಸುತ್ತದೆಯೇ? ಹಾಗಿದ್ದಲ್ಲಿ ಪ್ರಜಾಪ್ರಭುತ್ವವನ್ನು ರಕ್ಷಿಸಲು ಕಾಂಗ್ರೆ ಪಕ್ಷದಿಂದ ಮತ್ತು ರಾಜೀವ್‌ಗಾಂಧಿಯವರಿಂದ ಸಾಧ್ಯವಿದೆಯೇ? ಪ್ರಾವ್ದಾವರದಿಯ ಪ್ರಕಾರ ಭಾರತದಲ್ಲಿ ಎಡಶಕ್ತಿಗಳ ಬೆಳವಣಿಗೆ ಮತ್ತು ಐಕ್ಯತೆ ಸೋವಿಯತ್ ದೇಶಕ್ಕೆಅರಿವಾಗಿಲ್ಲವೆಂದು ಅನ್ನಿಸುವುದಿಲ್ಲವೇ? ಈ ಬಗ್ಗೆ ವಿಷದೀಕರಿಸಿ.

★

ಪ್ರಶ್ನೆ 2.

ಪ್ರಧಾನಿ ಪದವಿಯಿಂದ ರಾಜೀವ್ ಗಾಂಧಿಯನ್ನು ಇಳಿಸಿದರೂ ಕೂಡ ಕಾಂಗ್ರೆಯೇತರ ಪಕ್ಷದಿಂದ ಆಡಳಿತ ನಡೆಸುವ ಅವಕಾಶ ಇಲ್ಲ.ಆದರೆ ಕಾಂಗ್ರೆನಿಂದಲೇ ಬೇರೊಬ್ಬರು ಪ್ರಧಾನಿಯಾಗುತ್ತಾರೆ. ರಾಜೀವ್‌ಗಾಂಧಿಯಲ್ಲದೆ ಬೇರೆ ಇತರರು ಪ್ರಧಾನಿಯಾದರೆ ಇವತ್ತಿನ ವಿದೇಶಾಂಗ ನೀತಿಯಲ್ಲಿ ಬದಲಾವಣೆಯಾಗುತ್ತದೆ. ಅವರ್‍ಯಾರು ಕೂಡ ರಶ್ಯಾದೊಂದಿಗೆ ರಾಜೀವ್‌ಗಾಂಧಿಯವರಷ್ಟು ಒಳ್ಳೆಯ ಸಂಬಂಧ ಇಟ್ಟುಕೊಳ್ಳುವುದಾಗುವುದಿಲ್ಲ ಎನಿಸುತ್ತದೆ. ಅಷ್ಟೇ ಅಲ್ಲ ಅವರೆಲ್ಲಾ ಪಾಶ್ಚಿಮಾತ್ಯ ದೇಶಗಳೊಂದಿಗೆ ಸಂಬಂಧಗಳನ್ನು ಇನ್ನೂ ಹೆಚ್ಚಿಸಿಕೊಳ್ಳಬಹುದು.ಇಂತಹ ಪರಿಸ್ಥಿತಿಯಲ್ಲಿ ರಾಜೀವ್‌ಗಾಂಧಿಯವರ ಕೈಗಳಿಗೆ ಬಲ ನೀಡಬೇಕೆಂದು ರಶ್ಯಾ ತೀರ್ಮಾನಿಸಿದೆ. ಅದನ್ನು ಭಾರತದ ಕಮ್ಯುನಿಸ್ಟ್ ಪಕ್ಷಗಳು ಅನುಸರಿಸುತ್ತವೆ. ಮೇ 9ಮತ್ತು10ರಂದು ನಡೆದ ವಿರೋಧ ಪಕ್ಷಗಳ ಸಭೆಯಲ್ಲಿ ರಾಜೀವ್ ಗಾಂಧಿಯವರನ್ನು ಪದವಿಯಿಂದ ಇಳಿಸಿ ಬೇರೆಯವರನ್ನು ಪ್ರಧಾನಿಯಾಗಿ ಚುನಾಯಿಸಬೇಕೆಂದು ಎನ್. ಟಿ. ರಾಮರಾವ್ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಈ ರೀತಿ ಆದಾಗ ದೇಶದ ಆಡಳಿತ ಬಲ ಪ್ರತಿಗಾಮಿಗಳ ಕೈಗೆ ಹೋಗಬಹುದೆಂದು ಕಮ್ಯುನಿಸ್ಟ್ ಪಕ್ಷಗಳು ಆತಂಕಗೊಂಡಿವೆ. ಕಮ್ಯುನಿಸ್ಟ್ ಪಕ್ಷಗಳು ರಾಜೀವ್‌ಗಾಂಧಿಯವರ ಕೈಗಳನ್ನು ಬಲಪಡಿಸಿವೆ. ಈ ಪರಿಸ್ಥಿತಿಯುಲ್ಲಿ ಸಿ.ಪಿ.ಐ (ಎಂ) ಅನುಸರಿಸುವ ನಿಲುವು ಯಾವ ರೀತಿಯದು?

★

ನಾಗರೀಕ ಸ್ವಾತಂತ್ರ್ಯ, ಪ್ರಜಾಪ್ರಭುತ್ವಹಕ್ಕುಗಳು ನಶಿಸಿ ಸರ್ವಾಧಿಕಾರದತ್ತ ಸಾಗುವ ಸರ್ಕಾರದ ನೀತಿಯು ದೇಶವನ್ನು ತೀವ್ರವಾದ ಬಿಕ್ಕಟ್ಟನಲ್ಲಿ ಸಿಲುಕಿಸುತ್ತದೆ.

ಬಿಕ್ಕಟ್ಟಿನ ಸಂದರ್ಭದಲ್ಲಿ ಆಡಳಿತ ಪಕ್ಷ ಅಧಿಕಾರ ಕಳೆದುಕೊಳ್ಳುವುದನ್ನು ತಪ್ಪಿಸಿಕೊಳ್ಳಲು ಸರ್ಕಾರ ಜಾತೀವಾದಿಗಳ ಬೆಂಬಲ ಪಡೆದುಕೊಳ್ಳುವುದರಿಂದ ದೇಶದಲ್ಲಿ ಕೋಮು ಗಲಭೆಗೆ ಹಾದಿ ಮಾಡಿಕೊಡುತ್ತದೆ.

ಆಳುವ ಪಕ್ಷ ತನ್ನ ಧೋರಣೆಗಳನ್ನು ಪೂರ್ಣವಾಗಿ ಬದಲಿಸದಿದ್ದರೆ ಸಾಮ್ರಾಜ್ಯಶಾಹಿಗಳ ಧಾಳಿಯಿಂದ ಭಾರತದ ಪ್ರಜಾಪ್ರಭುತ್ವನ್ನು ರಕ್ಷಿಸಲು ಸಾಧ್ಯವಿಲ್ಲ. ಇದರಿಂದ ಎರಡು ಸಂಗತಿಗಳು ಸ್ಪಷ್ಟವಾಗುತ್ತವೆ. ಒಂದು ಭಾರತದ ಪ್ರಜಾಪ್ರಭುತ್ವಕ್ಕೆ ಇರುವ ಭೀಕರ ಅಪಾಯವನ್ನು ಮನಗಾಣದೇ ಕಾಂಗ್ರೆಸ್ ಪಕ್ಷವನ್ನು ವಿರೋಧಿಸುವ ಒಂದೇ ದೃಷ್ಟಿಯಿಂದ ಕೆಲ ಬಂಡವಾಳಶಾಹಿವಿರೋಧಿ ಪಕ್ಷಗಳುವರ್ತಿಸುತ್ತವೆ. ಈ ವರ್ತನೆಯನ್ನು ಭಾರತ ಕಮ್ಯೂನಿಸ್ಟ್ ಪಕ್ಷಗಳು ವಿರೋಧಿಸುತ್ತವೆ. ಎರಡನೆಯದು ಅಪಾಯದಲ್ಲಿರುವ ಭಾರತದ ಪ್ರಜಾಪ್ರಭುತ್ವವನ್ನು ರಕ್ಷಿಸಲು ಕಾಂಗ್ರೆಸ್ ಸರ್ಕಾರಕ್ಕೆ ಮಾತ್ರ ಸಾಧ್ಯ. ಆದುದರಿಂದ ಎಡ ಪಕ್ಷಗಳು ಅವರಿಗೆ ಬೆಂಬಲ ನೀಡಬೇಕೆಂದು ಕಾಂಗ್ರೆಸ್ ಪಕ್ಷದ ಅಭಿಪ್ರಾಯ. ಆದರೆ ಭಾರತದ ಕಮ್ಯೂನಿಸ್ಟರು ಅದನ್ನು ಒಪ್ಪುವುದಿಲ್ಲ. ಅಮೇರಿಕನ್ ನೇತೃತ್ವದಲ್ಲಿರುವ ಸಾಮ್ರಾಜ್ಯಶಾಹಿಗಳನ್ನು ಪರಿಣಾಮಕಾರಿಯಾಗಿ ಎದುರಿಸಬೇಕಾದರೆ ಅವರ ಕುತಂತ್ರಗಳಿಗೆ ಒಂದಲ್ಲ ಒಂದು ರೀತಿಯಲ್ಲಿ ಸಹಕರಿಸುತ್ತಿರುವ ಕಾಂಗ್ರೆಸ್ ಪಕ್ಷ ಹಾಗೂ ವಿರೋಧಿ ಬಂಡವಾಳಶಾಹಿ ಪಕ್ಷಗಳ ನಿಲುವಿಗಿಂತ ಭಿನ್ನವಾದ, ಸ್ವತಂತ್ರವಾದ ನಿಲುವನ್ನು ತಳೆಯಲು ಭಾರತ ಕಮ್ಯೂನಿಸ್ಟ್ ಪಕ್ಷಗಳಿಗೆ ಸಾಧ್ಯವಾಗಬೇಕು

ಆಡಳಿತ ಪಕ್ಷದ ಅಥವ ವಿರೋಧಿ ಬಂಡವಾಳಶಾಹಿ ಪಕ್ಷಗಳ ಬಾಲವಾಗಿ ಕೆಲಸಮಾಡಬೇಕೆಂಬ ಅವರ ಅಪೇಕ್ಷೆಯನ್ನು ನಾವು ಒಪ್ಪಲು ಸಾಧ್ಯವಿಲ್ಲ. ಭಾರತದ ಕಮ್ಯೂನಿಸ್ಟರ ನಿಲುವನ್ನು ಸೋವಿಯತ್ ಕಮ್ಯೂನಿಸ್ಟ್ ಪಕ್ಷವಾಗಲೀ ಅಥವಾ ಇತರ ದೇಶಗಳ ಕಮ್ಯೂನಿಸ್ಟ್ ಪಕ್ಷಗಳಾಗಲೀ ಒಪ್ಪಲೇಬೇಕೆಂದು ನಿರ್ಭಂಧಿಸುವುದು ಅಸಂಬದ್ಧವಾಗುತ್ತದೆ. ಏಕೆಂದರೆ ಅವರು ಭಾರತದ ಆಳುವ ಪಕ್ಷದ ವಿದೇಶಾಂಗ ನೀತಿಯ ರಾಜಕೀಯ ಭಾಗವನ್ನು ಮಾತ್ರ ನೋಡುತ್ತಾರೆ. ಆ ದೃಷ್ಟಿಯಿಂದ ನೋಡಿದರೆ ಕಾಂಗ್ರೆಸ್ ಆಡಳಿತದ ವಿದೇಶಾಂಗ ನೀತಿ ಪ್ರಪಂಚದಲ್ಲಿ ಪ್ರಜಾಪ್ರಭುತ್ವದ ಬೆಳವಣಿಗೆಗೆ ಸಹಾಯ ಮಾಡುತ್ತದೆ. ವಿದೇಶಾಂಗ ನೀತಿಯ ಆರ್ಥಿಕ ಭಾಗ ಹಾಗೂ ಭಾರತದ ಆಂತರಿಕ ನೀತಿ ಅವರವುಟ್ಟಿಗೆ ಮುಖ್ಯವಲ್ಲ ಭಾರತದ ಕಮ್ಯುನಿಸ್ಟರಿಗೆ ಕಾಂಗ್ರೆಸ್ ಸರ್ಕಾರದ ವಿದೇಶಾಂಗ ನೀತಿ ಅದರ ಜೊತೆಯಲ್ಲಿಯೇ ಆಂತರಿಕ ನೀತಿಯೂ ಮುಖ್ಯವಾದದ್ದು. ವಿದೇಶಾಂಗ ನೀತಿಯ ರಾಜಕೀಯ ಅಂಶಗಳಿಗೆ ಬೆಂಬಲನೀಡುವಾಗಲೇ ಕಾಂಗ್ರೆಸ್ ಸರ್ಕಾರದ ಇತರ ನೀತಿಗಳನ್ನು ಎದುರಿಸದಿದ್ದರೆ ಭಾರತೀಯ ಕಮ್ಯೂನಿಸ್ಟರಿಗೆ ಸ್ವತಂತ್ರವಾದ ನೆಲೆಯಿರುವುದಿಲ್ಲ.

ಮಾರ್ಕ್ಸ್‌ವಾದಿ–ಲೆನಿನ್‌ವಾದಿಗಳಿಗೆ ಭಾರತದ ಕಮ್ಯೂನಿಸ್ಟರ ನಿಲುವು ಬೇರೆದೇಶದ ಕಮ್ಯೂನಿಸ್ಟರಿಗೂ ಅವರ ಧೋರಣೆ ಇವರಿಗೂ ಅರ್ಥವಾಗುತ್ತದೆ. ಹೀಗೆ ಪರಸ್ಪರ ಅರ್ಥ ಮಾಡಿಕೊಳ್ಳುವುದಕ್ಕಾಗಿಯೇ ಭಾರತಕ್ಕೆ ಕಾ||ಡೋಬ್ರಿನಿನ್ ಬಂದಾಗ ನಡೆದ ಮಾತು ಕತೆಗಳು ಸಹಾಯ ಮಾಡುತ್ತವೆ.

ಭಾರತದ ಕಮ್ಯೂನಿಸ್ಟರಿಗೂ ಮತ್ತು ಇತರ ವಿರೋಧ ಪಕ್ಷಗಳಿಗೂ ಇರುವ ಈ ವ್ಯತ್ಯಾಸವನ್ನು ಕಾಣದೆ ರಾಮರಾವ್ ಹಾಗೂ ಹೆಗ್ಡೆಯಂತಹ ನಾಯಕರುಗಳು ವಿರೋಧ ಪಕ್ಷಗಳೆಲ್ಲಾ ಒಂದಾಗಬೇಕೆಂದು ಆಗ್ರಹ ಪಡಿಸುತ್ತಿದ್ದಾರೆ.ಮೊದಲು ಹೆಗ್ಡೆ ಹೇಳಿದ ನಂತರ ರಾಮರಾವ್ ಬೆಂಬಲ ನೀಡಿದ ವಿರೋಧ ಪಕ್ಷಗಳ ಕಾನ್ ಫೆಡರೇಷನ್‌ನ ಕಲ್ಪನೆ ಈ ರೀತಿಯದು. ಇದು ನಮಗೆ ಒಪ್ಪಿಗೆಯಿಲ್ಲವೆಂದು ರಾಮರಾವ್‌ರವರ ಕರೆಯ ಮೇಲೆ ದೆಹಲಿಯಲ್ಲಿ ಸೇರಿದ ಶೃಂಗಸಭೆಯುಲ್ಲಿ ಎಡಪಕ್ಷಗಳು ಒಟ್ಟಾಗಿ ಹೇಳಿದವು. ಆ ಸಮ್ಮೇಳನದಲ್ಲಿ ಭಾಗವಹಿಸದ ಸಿ.ಪಿ.ಐ. ಕೂಡಾ ಇದನ್ನೇ ಹೇಳಿತು.

ಈ ಮೊದಲೇ ಹೇಳಿದಂತೆ ಭಾರತದ ಪ್ರಜಾಪ್ರಭುತ್ವವನ್ನು ಹಾಗೂ ದೇಶದ ಸಮಗ್ರತೆಯನ್ನು ಅಪಾಯದಲ್ಲಿ ಸಿಕ್ಕಿಸಿದ ರಾಜೀವ್ ಆಡಳಿತವನ್ನು ಈ ಕ್ಷಣದಲ್ಲಿ ಆಡಳಿತದಿಂದ ಇಳಿಸಲು ಸಾಧ್ಯವಾದರೆ ಈ ಕ್ಷಣದಲ್ಲಿಯೇ ಇಳಿಸಬೇಕೆಂಬುದು ಕಮ್ಯೂನಿಸ್ಟರ ಅಭಿಪ್ರಾಯ ಆದರೆ ಅದಕ್ಕಾಗಿ ಅಮೇರಿಕನ ಸಾಮ್ರಾಜ್ಯಶಾಹಿಗಳು ಭಾರತಕ್ಕೆ

(6ನೇ ಪುಟ ನೋಡಿ)

ಆಕಾಶವಾಣಿ - ದೂರದರ್ಶನದ ದುರುಪಯೋಗದ ವಿರುದ್ಧ ಪ್ರತಿಭಟನೆ

ಆಕಾಶವಾಣಿ ಮತ್ತು ದೂರದರ್ಶನವನ್ನು ಕೇಂದ್ರದಲ್ಲಿರುವ ಆಳುವ ಕಾಂಗ್ರೆಸ್ ಪಕ್ಷ ತನ್ನ ಪ್ರಚಾರ ಸಾಧನವನ್ನಾಗಿ ದುರುಪಯೋಗ ಪಡಿಸಿಕೊಳ್ಳುತ್ತಿರುವುದರ ವಿರುದ್ಧ ರಾಷ್ಟ್ರವ್ಯಾಪಿ ಪ್ರತಿಭಟನಾ ದಿನಾಚರಣೆಗೆ ಎಸ್.ಎಫ್.ಐ. ಮತ್ತು ಡಿ.ವೈ.ಎಫ್.ಐ. ಕೇಂದ್ರ ಸಮಿತಿಗಳು ಜಂಟಿ ಕರೆ ನೀಡಿದ್ದವು. ಇದರ ಅಂಗವಾಗಿ ಬೆಂಗಳೂರು ಜಿಲ್ಲಾ ಸಮಿತಿಗಳ ಆಶ್ರಯದಲ್ಲಿ ಜೂ.15ರಂದು ಎರಡು ಸಂಘಟನೆಗಳ ಕಾರ್ಯಕರ್ತರು ಬೆಂಗಳೂರಿನ ಆಕಾಶವಾಣಿ ಮತ್ತು ದೂರದರ್ಶನಗಳ ಮುಂದೆ ಪ್ರತಿಭಟನಾ ಪ್ರದರ್ಶನವನ್ನು ನಡೆಸಿದ ಬಳಿಕ ಆಕಾಶವಾಣಿ ಮತ್ತು ದೂರದರ್ಶನದ ನಿರ್ದೇಶಕರಿಗೆ ಮನವಿ ಪತ್ರ ಅರ್ಪಿಸಲಾಗಿದೆ. ಈ ನಿಯೋಗದಲ್ಲಿ ಕಾ|| ಎಸ್.ಆರ್. ಆರಾಧ್ಯ, ಎಸ್. ಶಿವರಾಂ, ಎನ್. ರಾಜಣ್ಣ, ಟಿ. ಶಿವಶಂಕರ್, ಬೈಯಾ ರೆಡ್ಡಿಯವರಿದ್ದರು.

ಬೇಡಿಕೆಗಳು

1. ಆಕಾಶವಾಣಿ ಮತ್ತು ದೂರದರ್ಶನ ಕೇಂದ್ರಗಳ ಪ್ರಜಾಸತ್ತಾತ್ಮಕ ಕಾರ್ಯನಿರ್ವಾಹಣೆಗೆ ಸ್ವಾಯತ್ತ ಮಂಡಳಿಯೊಂದನ್ನು ರಚಿಸಬೇಕು.

2. ದೂರದರ್ಶನ ಪ್ರಸಾರದಲ್ಲಿ ಎಲ್ಲಾ ಪ್ರಾಂತೀಯ ಭಾಷೆಗಳಿಗೂ ಸಮಾನ ಪ್ರಾತಿನಿಧ್ಯ ನೀಡಬೇಕು.

3. ಎರಡನೇ ಟಿ.ವಿ. ಚಾನೆಲನ್ನು ರಾಜ್ಯ ಸರ್ಕಾರಗಳಿಗೆ ವಹಿಸಿಕೊಡಬೇಕು.

4. ದೂರದರ್ಶನದಲ್ಲಿ ಬಹುರಾಷ್ಟ್ರೀಯ ಕಂಪನಿಗಳ ಮತ್ತು ಬೃಹತ್ ಉದ್ಯಮಗಳ ಜಾಹೀರಾತುಗಳ ಪ್ರಮಾಣವನ್ನು ಕಡಿತಗೊಳಿಸಬೇಕು.

ಜಾತ್ಯಾತೀಯತೆ - ರಾಷ್ಟ್ರೀಯ ಸಮಗ್ರತೆ, ವಿಶ್ವಶಾಂತಿ ಅಲಿಪ್ತ ನೀತಿಯ ಧೋರಣೆಗಳನ್ನು ಜನಪ್ರಿಯಗೊಳಿಸುವ, ಗ್ರಾಮಾಂತರ ಪ್ರದೇಶ ಹಾಗೂ ಜನನಿಬಿಡ ಸ್ಥಳಗಳಲ್ಲಿ ಸಾರ್ವಜನಿಕ ಟಿ.ವಿ.ಗಳನ್ನು ಅಧಿಕ ಸಂಖ್ಯೆಯಲ್ಲಿ ಪ್ರಾರಂಭಿಸಬೇಕೆಂದು ಕೇಂದ್ರಸರ್ಕಾರವನ್ನು ಮನವಿ ಪತ್ರದಲ್ಲಿ ಒತ್ತಾಯಿಸಲಾಗಿದೆ. ●

ನಿವೃತ್ತ ಪೌರ ಕಾರ್ಮಿಕರಿಗೆ ನ್ಯಾಯ ದೊರೆಯುಲಿ

ನೌಕರರು ನಿವೃತ್ತಿ ಹೊಂದುವುದಕ್ಕೆ ಮೂರು ವರ್ಷ ಪೂರ್ವದಲ್ಲಿ ಅವರನ್ನು ಬದ್ಲಿ ಮಾಡಬಾರದೆಂಬ ಸರ್ಕಾರದ ನಿಯಮವಿದ್ದರೂ ಕೂಡ ಆಜ್ಞೆ ಉಲ್ಲಂಘಿಸಿ ನೂರಾರು ನಗರಸಭೆ ನೌಕರರನ್ನು ಬದ್ಲಿ ಮಾಡಲಾಗಿದೆ. ಹೋದ ವರ್ಷ ಇದೇ ರೀತಿ ಮಾಡಿದಾಗ ತಕರಾರು ಮಾಡಲಾಗಿತ್ತು. ಸರಿಪಡಿಸುವುದಾಗಿ ಸರಕಾರ ಆಶ್ವಾಸನೆ ನೀಡಿದ್ದರೂ ಈ ವರ್ಷವೂ ಹಳೇ ತಪ್ಪನ್ನು ಮಾಡಲಾಗಿತ್ತು. ನಿವೃತ್ತಿ ಹೊಂದಲು 4 ತಿಂಗಳಿರುವ ಕೆ.ಎಂ ಹಿರೇಮಠ(ಜಮಖಂಡಿ, 7ತಿಂಗಳಿರುವ ಎಸ್. ಎಂ. ಮುಲಿಮಾಡು (ಇಂಡಿ) ಒಂದು ವರ್ಷದಲ್ಲಿ ನಿವೃತ್ತನಾಗುವ ಹೃದಯರೋಗಿ ಕೆ.ಕೆ. ವನಾಂಗ ಮೊದಲಾದವರನ್ನು ಬಿಜಾಪುರ ಜಿಲ್ಲಾಧಿಕಾರಗಳು ಬದ್ಲಿ ಮಾಡಿದ ಒಂದೆರಡು ಉದಾಹರಣೆಗಳು. ಸರಕಾರದ ಹಾಗೂ ಜಿಲ್ಲಾಧಿಕಾರಿಗಳ ಈ ನೀತಿಯನ್ನು ಒಕ್ಕೂಟ ಬಲವಾಗಿ ಖಂಡಿಸುತ್ತದೆ. ನಗರ ಸಭೆಗಳಿಗೆ ವೇತನ ನೀಡುವ ಯೋಗ್ಯತೆ ಇಲ್ಲದಿರುವಾಗ ಈ ರೀತಿ ಬದ್ಲಿಯಾದ ನೌಕರರು ತಮ್ಮ ಕುಟುಂಬದ ಉಪಜೀವನ ಹೇಗೆ ನಡೆಸಬೇಕು. ಸರಕಾರ ಉತ್ತರಿಸಬೇಕು. ಇದು ಅತ್ಯಂತ ಅಮಾನವೀಯ ಅಕ್ರಮವಲ್ಲದೆ ಮತ್ತೇನಲ್ಲ.

27-4-87ಕ್ಕೆ ಹೊರಡಿಸಿದ ಸರಕಾರಿ ಆಜ್ಞೆಯಂತೆ ಸ್ಥಳೀಯ ಸಂಸ್ಥೆಗಳ ನಿವೃತ್ತರಿಗೆ ಹಾಗೂ ನಿವೃತ್ತರ ಕುಟುಂಬಗಳಿಗೆ ಸರಕಾರಿ ನೌಕರರಿಗೆ ಲಭ್ಯವಾಗಿರುವ ಹೊಸ ಹೆಚ್ಚಿನ ತುಟ್ಟಿಭತ್ತೆ ಲಭ್ಯವಾಗುವಂತೆ ಮಾಡಲಾಗಿದೆ. ಆದರೆ ಸರಕಾರದ ಲೆಕ್ಕಾಧಿಕಾರಿಗಳು (ಕಂಟ್ರೋಲರ್ ಆಫ್ ಸ್ಟೇಟ್ ಅಕೌಂಟ್ಸ್) ಸರಕಾರದ ಈ ಆಜ್ಞೆ ಪಾಲಿಸುತ್ತಿಲ್ಲ. ಕಾರಣ ನಿವೃತ್ತಿ ನೌಕರರಿಗೆ ಅನ್ಯಾಯವಾಗುತ್ತಿದೆ. ಸರಕಾರಿ ಆಜ್ಞೆಯನ್ನು ಪಾಲಿಸಿ ನಿವೃತ್ತಿ ಕುಟುಂಬಗಳಿಗೆ ಹೆಚ್ಚಿನ ತುಟ್ಟಿಭತ್ತೆ ನೀಡಬೇಕೆಂದು ರಾಜ್ಯದ ಜಿಲ್ಲಾಧಿಕಾರಿಗಳಿಗೆ ಆಜ್ಞೆ ಮಾಡಬೇಕೆಂದು 16-5-87 ರಂದೇ ಪೌರಾಡಳಿತ ಮಂತ್ರಿ ಚಂದ್ರಶೇಖರ್ ಅವರಿಗೆ ಮನವಿ ಸಲ್ಲಿಸಿದ್ದರೂ ಕೂಡ ಸರಕಾರ ಯಾವುದೇ ಕ್ರಮತೆಗೆದುಕೊಳ್ಳದಿರುವುದು ಖಂಡನೀಯ. ಜನತಾ ಸರಕಾರ ಈ ರೀತಿ ನಿವೃತ್ತ ಕುಟುಂಬಗಳಿಗೆ ಅನ್ಯಾಯ ಮಾಡುವುದನ್ನು ಒಕ್ಕೂಟ ಬಲವಾಗಿ ಖಂಡಿಸುತ್ತದೆ. ಎಂದು ಕರ್ನಾಟಕ ರಾಜ್ಯ ಪೌರ ಕಾರ್ಮಿಕರ ಒಕ್ಕೂಟದ ಅಧ್ಯಕ್ಷರಾದ, ಕಾ| ಎನ್. ಕೆ. ಉಪಾಧ್ಯಾಯ, ಅವರು ಪ್ರತಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ. ●

ಧಾರವಾಡ

ಬಿ. ಎಂ. ಎಸ್. ವಿರುದ್ಧ ಪ್ರದರ್ಶನ

ಧಾರವಾಡದ ಭೋರುಕಾ ಟೆಕ್ಸ್‌ಟೈಲ್ಸ್ ಕಾರ್ಖಾನೆಯ ಕಾರ್ಮಿಕರು ಜೂ. 4ರಂದು ಅದೇ ಕಾರ್ಖಾನೆಯ ಬಿ.ಎಂ.ಎಸ್. ನೇತೃತ್ವದ ಕಾರ್ಮಿಕ ಸಂಘದ ಗೂಂಡಾಗಿರಿಯ ವಿರುದ್ಧ ಮೆರವಣಿಗೆ ಮತ್ತು ಬಹಿರಂಗ ಸಭೆಯನ್ನು ನಡೆಸಿದರು. ಬಿ.ಎಂ.ಎಸ್. ಸಂಘವು ಪ್ರಾದೇಶಿಕತೆಯ ಆಧಾರದಲ್ಲಿ ಹೊರ ರಾಜ್ಯಗಳಿಂದ ಬಂದ ಕಾರ್ಮಿಕರ ವಿರುದ್ಧ ಗೂಂಡಾಗಿರಿಯನ್ನು ನಡೆಸುತ್ತಿದೆ. ಇದರಿಂದ ಬೇಸತ್ತ ಆಡಳಿತ ವರ್ಗ ಫೆಬ್ರವರಿ ತಿಂಗಳಲ್ಲಿ ಹೊರಗೀಲಿಯನ್ನು ಘೋಷಿಸಿತ್ತು. ಆಗ ಸಿ.ಐ.ಟಿ.ಯು. ಸಂಘ ಲಾಕೌಟ್‌ಅನ್ನು ತೆರೆಯಲು ಸರ್ವ ಪ್ರಯತ್ನಗಳನ್ನು ನಡೆಸಿತು. ಇದರಿಂದಾಗಿ ಹೆಚ್ಚು ಹೆಚ್ಚು ಕಾರ್ಮಿಕರು ಸಿ.ಐ.ಟಿ.ಯು. ಸಂಘವನ್ನು ಬೆಂಬಲಿಸುತ್ತಿರುವುದರಿಂದ ಬಿ.ಎಂ.ಎಸ್. ಸಂಘಕ್ಕೆ ಸೇರಿದವರು ಸಿ.ಐ.ಟಿ.ಯು. ಕಾರ್ಯಕರ್ತರ ಮೇಲೆ ದಾಳಿ, ಹಲ್ಲೆಗಳನ್ನು ನಡೆಸತೊಡಗಿದ್ದಾರೆ. ಕಳೆದ ಆರು ತಿಂಗಳಲ್ಲಿ ಬಿ.ಎಂ.ಎಸ್. ವಿರುದ್ಧ 94 ಪೋಲೀಸ್ ಕಂಪ್ಲೇಂಟ್ ನೀಡಲಾಗಿದೆ. ಆದರೂ ಪೋಲೀಸ್ ಅಧಿಕಾರಿಗಳು ಈ ಬಗ್ಗೆ ಯಾವುದೇ ಕ್ರಮ ಕೈಗೊಂಡಿಲ್ಲವಾದ್ದರಿಂದ ಮತ್ತು ಸಂಧಾನಗಳೂ ಕೂಡ ಯಶಸ್ವಿಯಾಗದ ಕಾರಣ ಸಿ.ಐ.ಟಿ.ಯು. ಸಂಘವು ಬಿ.ಎಂ.ಎಸ್.ನ ದೌರ್ಜನ್ಯದ ವಿರುದ್ಧ ಮೆರವಣಿಗೆ ಮತ್ತು ಬಹಿರಂಗ ಸಭೆಯನ್ನು ಸಂಘಟಿಸಿತು. ಜೂ.4ರಂದು ಸಿ.ಐ.ಟಿ.ಯು. ನೇತೃತ್ವದ ಕಾರ್ಮಿಕ ಸಂಘಗಳ ಕಾರ್ಯಕರ್ತರು ಸತ್ತೂರಿನಿಂದ ಮೆರವಣಿಗೆ ಹೊರಟು 7ಕಿ.ಮೀ. ಕ್ರಮಿಸಿ ಧಾರವಾಡದ ಜಿಲ್ಲಾಧಿಕಾರಿಗೆ ಮನವಿ ಅರ್ಪಿಸಿದರು. ನಂತರ ಕೆ. ಸಿ. ಸಿ ಬ್ಯಾಂಕ್ ವೃತ್ತದ ಬಳಿ ನಡೆದ ಬಹಿರಂಗ ಸಭೆಯನ್ನುದ್ದೇಶಿಸಿ ಸಿ.ಐ.ಟಿ.ಯು.ನ ಕಾ||ರವಿ ಪಾಟೀಲ, ಟಿ.ಎಸ್. ಪಾಟೀಲ, ದುಬೆ, ಎಸ್ ಪರಪ್ಪನವರ ಮತ್ತು ಎಂ ಬಿ. ಕಟ್ಟಿ, ಡಿ.ವೈ.ಎಫ್.ಐ.ನ ಕೃಷ್ಣ ಕಟ್ಟಿ, ಎಸ್.ಎಫ್.ಐ.ನ ಸಾದಿಕ್ ಸೌದಾಗರ ಮುಂತಾದವರು ಮಾತನಾಡಿ ಬಿ.ಎಂ.ಎಸ್.ನ ಗೂಂಡಾಗಿರಿ ಮುಂದುವರೆದದ್ದೇ ಆದರೆ ತಾವು ಸುಮ್ಮನಿರಲು ಸಾಧ್ಯವಿಲ್ಲವೆಂದು ಹೇಳಿದರು. ●

ವಿದ್ಯುತ್ ರಾಜಕೀಯ

[4ನೇ ಪುಟದಿಂದ]

ಗ್ರಾಮೀಣ ಪ್ರದೇಶ

4. ಈಗ ಕರ್ನಾಟಕ ಗ್ರಾಮೀಣ ಪ್ರದೇಶದಲ್ಲಿ ಕೇವಲ ಐದರಲ್ಲಿ ಒಂದು ಭಾಗ ಮನೆಗಳು ಮಾತ್ರ ವಿದ್ಯುತ್ ಉಪಯೋಗಿಸುತ್ತವೆ. ಉಳಿದೆಡೆ ಸೀಮೆ ಎಣ್ಣೆ ಬುಡ್ಡಿಗಳೇ. ಈ ಬುಡ್ಡಿಗಳು ಇನ್ನಷ್ಟು ಹೆಚ್ಚಾಗಿ ಅನೇಕ ಮನೆಗಳು ವಿದ್ಯುತ್‌ನಿಂದ ವಂಚಿತವಾಗುತ್ತವೆ.

5. ದೇಶದ ಅನೇಕ ರಾಜ್ಯಗಳಲ್ಲಿ ಅದರಲ್ಲಿಯೂ ನೀರಾವರಿ ಹೆಚ್ಚಿರುವ ರಾಜ್ಯಗಳಾದ ಹರಿಯಾಣ ಪಂಜಾಬ್‌ನಲ್ಲಿ ಕೂಡ ಶೇ. 25-30ರಷ್ಟು ವಿದ್ಯುತ್ ಕೃಷಿಗಾಗಿ ಬಳಕೆಯಾಗುತ್ತದೆ. ಆದರೆ ಕರ್ನಾಟಕಲ್ಲಿ ಕೇವಲ ಶೇ. 20ನೀರಾವರಿ ಅಷ್ಟೇ ಇದ್ದರೂ ಕೃಷಿಗಾಗಿ ವಿದ್ಯುತ್ ಬಳಕೆ ಕೇವಲ ಶೇ. 7ರಷ್ಟು. ಕೃಷಿ ಬಳಕೆಗಾಗಿ ವಿದ್ಯುತ್ ದರವನ್ನು ಶೇ 25ರಿಂದ 33 ಭಾಗ ಹೆಚ್ಚಿಸಿದ ವಿದ್ಯುತ್ ಬಳಕೆಯನ್ನು ಪ್ರೋತ್ಸಾಹಿಸಿ ನೀರಾವರಿಯನ್ನೇನು ಹೆಚ್ಚು ಮಾಡುವುದಿಲ್ಲ ಬದಲಾಗಿ ಕುಗ್ಗಿಸುತ್ತದೆ. ○

ಆಫ್ರಿಕಾ ಸಂಸ್ಕೃತಿಯ ಪ್ರತಿಬಿಂಬ.

(2ನೇ ಪುಟದಿಂದ)

(ಸಂ : ಹಿ.ಮ. ಗುರುಬಸವರಾಜ್, ಅಭಿವ್ಯಕ್ತಿ ಪ್ರಕಾಶನ ಹಗರಿಬೊಮ್ಮನಹಳ್ಳಿ ಬಳ್ಳಾರಿ ಜಿಲ್ಲೆ 58 32 12)

ಕಪ್ಪುನಾಡಿನ ಕೆಂಪು ಸೂರ್ಯ ದ. ಆಫ್ರಿಕಾದ ಬೋಥಾ ಸರ್ಕಾರದ ದೌರ್ಜನ್ಯಕ್ಕೆ ತುತ್ತಾಗಿ ಗಲ್ಲಿಗೇರಿದ ಕವಿ, ಹೋರಾಟಗಾರ ಬೆಂಜಮಿನ್ ಮೊಲಾಯಿಸ್‌ರ ಕುರಿತ 39 ಕವಿತೆಗಳ ಸಂಕಲನ.

ಈ ಸಂಕಲನ ತತ್‌ಕ್ಷಣವೇ ಗಮನ ಸೆಳೆಯುವುದು ದೂರದ ಆಫ್ರಿಕಾದಲ್ಲಿ ನಡೆದ ಘಟನೆಯನ್ನು ಕುರಿತು ಈ ನೆಲದ ಕವಿಗಳು ಸ್ಪಂದಿಸಿರುವ ರೀತಿಗೆ ಹಾಗೂ ಸಂಖ್ಯೆಗೆ. ಈ ಹಿಂದೆ ನಡೆದ ಅಂತರಾಷ್ಟ್ರೀಯ ಘಟನೆಗಳು ನಮ್ಮನ್ನು ಕಲಕದೇ ಹಾಗೇ ಹಾದು ಹೋಗುತ್ತಿದ್ದ ದಿನಗಳಲ್ಲಿ ನಡೆದ ಈ ದೌರ್ಜನ್ಯಕ್ಕೆ ಕನ್ನಡದಲ್ಲಿ ಅತ್ಯಂತ ಹೆಚ್ಚಿನ ಸಂಖ್ಯೆಯಲ್ಲಿ ಕವಿಗಳು ಸ್ಪಂದಿಸಿದ್ದಾರೆ.

ಹಾಡುಗಳಿಗೆ, ದಿನದ ಬದುಕಿನ ಮುಟ್ಟುಗಳಿಗೆ ಆಫ್ರಿಕಾದ ವಿಷಾದವನ್ನು ಒಗ್ಗಿಸುವ ಕಾರ್ಯವನ್ನು ಈ ಸಂಕಲನದಲ್ಲಿ ಕಾಣಬಹುದು. ಯಾವುದೇ ನೋವಿನ ದೌರ್ಜನ್ಯದ ಘಟನೆಗೆ ಅಂತರಾಷ್ಟ್ರೀಯ ಸ್ಪಂದನ ಹೇಗಿರುತ್ತದೆಂಬುದಕ್ಕೆ ಈ ಕವನ ಸಂಕಲನ ಸಾಕ್ಷಿ. ಎಲ್ಲಾ ನೋವುಗಳಲ್ಲಿಯೂ ಹೇಗೆ ವಿಶ್ವದ ಜನರು ತಮ್ಮನ್ನು ಕಂಡುಕೊಳ್ಳುತ್ತಾರೆನ್ನುವ ಈ ಸಂಕಲನದುದ್ದಕ್ಕೂ ಬೆಂಜಮಿನ್ ಮೊಲಾಯಿಸ್ ಮಾತ್ರವಲ್ಲದೇ ದ. ಆಫ್ರಿಕಾದ ನೋವುಗಳು, ಅಲ್ಲಿನ ಬೋಥಾ ಸರ್ಕಾರಕ್ಕೆ ಧಿಕ್ಕಾರವನ್ನು ಮೊಳಗಿಸಿರುವ ಕವನಗಳೂ ಇವೆ.

ಈ ಹಿಂದೆ ಕೇವಲ ನಗರಮಾತ್ರಕ್ಕೆ ಸೀಮಿತವಾಗಿಬಿಡಬಹುದಾಗಿದ್ದ ಈ ಅಂತರಾಷ್ಟ್ರೀಯ ಘಟನೆಗಳು ಇಂದು ನೆಲದಾಳ ಹೊಕ್ಕಿದೆ. ಈ ಹಿಂದೆ ಸಾಂಸ್ಕೃತಿಕವಾಗಿ ನಿರ್ಲಕ್ಷ್ಯವಾಗಿದ್ದ ಮೂಲೆಗಳಿಂದಲೂ ಕವನ ಹುಟ್ಟಿ ಬಂದಿದೆ.

ಎ.ಎಂ. ಮದರಿಯವರ 'ಕರಿನೆಲದ ಹಕ್ಕಿ', ಪೋಲೀಸ್ ಪಾಟೀಲರ 'ಆತಲ್ಲೋ ಮನಸ ಗಿರಿಗಿರಿ', ಕೆರಳ್ಳಿ ಗುರುನಾಥ ರೆಡ್ಡಿಯವರ ಬೆಂಜಮಿನ್ ಮೊಲಾಯಿಸ್ ಈ ಸಂಕಲನದ ಪ್ರಾತಿನಿಧಿಕ ಕವನಗಳು, ಬೆಂಜಮಿನ್ ಮೊಲಾಯಿಸ್ ಕುರಿತಂತೆ ಮಾತ್ರವಲ್ಲದೆ ಈ ಸಂಕಲನದಲ್ಲಿ ಮೊಲಾಯಿಸ್ ಸ್ವತಃ ರಚಿಸಿದ ಎರಡು ಕವನಗಳ ಅನುವಾದವೂ ಸೇರಿದೆ.

ಬಳ್ಳಾರಿಯ ಹಳ್ಳಿಯಿಂದ ಹೊರಬಂದ ಈ ಸಂಕಲನದಲ್ಲಿ ಮೊಲಾಯಿಸ್‌ನನ್ನು ಕುರಿತು ಹಲವಾರು ಕವನಗಳನ್ನು ಒಂದೆಡೆ ಕಲೆಹಾಕಿದ್ದಕ್ಕಾಗಿ ಸಂಪಾದಕ ಹಿ.ಮ. ಗುರುಬಸವರಾಜ್ ಅಭಿನಂದನೀಯರು.

ಅಮೊಕ್ - ಚಿತ್ರ

ಆಫ್ರಿಕಾ ದಿನದ ಅಂಗವಾಗಿ ದೂರದರ್ಶನದಲ್ಲಿಯೂ ಅಪರೂಪವಾಗಿ ದ.ಆಫ್ರಿಕಾದ ಚಿತ್ರವೊಂದನ್ನು ಪ್ರಸಾರ ಮಾಡಲಾಯಿತು.

ದ.ಆಫ್ರಿಕಾದ ನೋವಿನ ಕುಲುಮೆಯಾದ ಜೋಹಾನ್ಸ್‌ಬರ್ಗ್‌ನ ಭೀಕರತೆಯನ್ನು ಬಳಸುವ ಈ ಚಿತ್ರ, ಜೋಹಾನ್ಸ್ ಬರ್ಗ್ ಮೂಲಕ ಆಫ್ರಿಕಾದ ನಿಟ್ಟುಸಿರನ್ನು ಪ್ರತಿನಿಧಿಸುತ್ತದೆ.

ದ.ಆಫ್ರಿಕಾದ ಹಳ್ಳಿಯೊಂದರಲ್ಲಿ ಕೆಲಸದಲ್ಲಿದ್ದ ಶಾಲಾ ಶಿಕ್ಷಕನಿಗೆ ಜೋಹಾನ್ಸ್‌ಬರ್ಗ್‌ನಲ್ಲಿರುವ ಆತನ ತಂಗಿಗೆ ತೀವ್ರ ಕಾಯಿಲೆಯಾಗಿದೆ ಎಂದು ಪತ್ರ ಬರುತ್ತದೆ. ಆತ ಜೋಹಾನ್ಸ್‌ಬರ್ಗ್‌ಗೆ ಹೊರಡುತ್ತಾರೆ 'ಜೋಹಾನ್ಸ್ ಬರ್ಗ್‌ಗೆ ಹೋಗುವವರು ಎಂದೂ ಮರಳಲಾರರು' ಎಂದು ಪದೇ ಪದೇ ಹೇಳುತ್ತಿದ್ದ ಆ ಶಿಕ್ಷಕನಿಗೆ ಈಗ ತಲ್ಲಣ. ಆತನಿಗೆ ಜೋಹಾನ್ಸ್ ಬರ್ಗ್‌ನಲ್ಲಿ ವರ್ಣಭೇಧ ಪದ್ಧತಿಯ ಕಾರ್ಯದ ಎಲ್ಲಾ ಮಜಲುಗಳ ಅರಿವಾಗುತ್ತಾ ಹೋಗುತ್ತದೆ.

ತನ್ನ ಮಗುವನ್ನು ಸಾಕಲಾರದೆ, ಮಾದಕ ವಸ್ತು ಮಾರಾಟ ಮಾಡುವ ತಂಗಿ, ವರ್ಣ ಭೇದದ ವಿರುದ್ಧ ಗಣಿ ಕಾರ್ಮಿಕರನ್ನು ಸಂಘಟಿಸುವ ತಮ್ಮ ಬಿಳಿ ಪತ್ರಕರ್ತರನ್ನು ಕೊಲೆ ಮಾಡಿ ಬಂದೀಖಾನೆ ಸೇರಿರುವ ಮಗ, ದೇವರಲ್ಲಿ ನಂಬಿಕೆ ಕಳೆದುಕೊಂಡಿರುವ ಕರಿಯ ಪಾದ್ರಿಯ ಮೂಲಕ ಅಮೊಕ್ ದ. ಆಫ್ರಿಕಾವನ್ನು ಬಿಚ್ಚುತ್ತಾ ಹೋಗುತದೆ.

ಕರಿಯರ ಹೋರಾಟದ ಹಿನ್ನೆಲೆಯಲ್ಲಿ ಬಿಳಿಯರೊಳಗೆ ನಡೆಯುತ್ತಿರುವ ಧೃವೀಕರಣ ಸ್ಪಷ್ಟವಾಗಿ ಈ ಚಿತ್ರದಲ್ಲಿ ಮೂಡಿ ಬಂದಿದೆಯಲ್ಲದೆ. ದ.ಆಫ್ರಿಕಾ ಹೇಗೆ ಹುಚ್ಚೆದ್ದು ದಿಕ್ಕಾಪಾಲಾಗಿ ಓಡುತ್ತಿದೆ ಎಂಬುದನ್ನು ಚಿತ್ರಿಸಲಾಗಿದೆ. 'ಅಮೊಕ್' ತನ್ನ ಎಲ್ಲಾ ಸಾಮರ್ಥ್ಯದೊಂದಿಗೆ ಉತ್ತಮವಾಗಿ ಮೂಡಿ ಬಂದಿದೆ.

ಕಾರ್ಮಿಕ ಸಚಿವರೊಂದಿಗೆ ನಿಯೋಗದ ಭೇಟಿ

ಸಿ.ಐ ಟಿ.ಯು.ನ ಪ್ರಾದೇಶಿಕ ಸಮಿತಿ ಸಂಚಾಲಕರಾದ ಕಾ. ಎಂ. ಬಿ. ಕಟ್ಟಿ ಅವರ ನೇತೃತ್ವದ ನಿಯೋಗವೊಂದು ಜೂನ್ 9ರಂದು ಕಾರ್ಮಿಕ ಸಚಿವರನ್ನು ಭೇಟಿಯಾಗಿ ಕಾರ್ಮಿಕರು ಎದುರಿಸುತ್ತಿರುವ ಹಲವಾರು ಸಮಸ್ಯೆಗಳ ಬಗ್ಗೆ ಚರ್ಚಿಸಿತು.

ಸರ್ಕಾರದಿಂದ ನಿಗದಿತ ಕನಿಷ್ಟ ಕೂಲಿ ಜಾರಿಯಾಗದಿರುವ ಬಗ್ಗೆ ಬೀಡಿ ಕೈಗಾರಿಕೆಯಲ್ಲಿ ಕನಿಷ್ಟ ಕೂಲಿ ನೀಡದಿರುವ ಬಗ್ಗೆ, ಗುರುತಿನ ಚೀಟಿ, ಭವಿಷ್ಯನಿಧಿ ರಸೀತಿ, ನೀಡದಿರುವ ಬಗ್ಗೆ ಮಹಿಳಾ ಕಾರ್ಮಿಕರಿಗೆ ಹೆರಿಗೆ ಭತ್ತೆ, ರಜೆ ನೀಡದಿರುವ ಬಗ್ಗೆ ಕಾರ್ಮಿಕ ನ್ಯಾಯಾಲಯಗಳಲ್ಲಿ ಪ್ರಕರಣಗಳನ್ನು ಶೀಘ್ರವಾಗಿ ಇತ್ಯರ್ಥಗೊಳಿಸದಿರುವ ಬಗ್ಗೆ ನಿಯೋಗವು ಸಚಿವರೊಂದಿಗೆ ಸಮಾಲೋಚನೆ ನಡೆಸಿತು. ಈ ಬಗ್ಗೆ ಕೂಡಲೇ ಸಂಬಂಧಿಸಿದ ಅಧಿಕಾರಿಗಳಿಗೆ ಸೂಚನೆ ನೀಡುವುದಾಗಿ ಸಚಿವರು ಭರವಸೆ ನೀಡಿದ್ದಾರೆ.

(5ನೇ ಪುಟದಿಂದ)

ಒಡ್ಡುತ್ತಿರುವ ಅಪಾಯದ ಬಗ್ಗೆ ಕಮ್ಯುನಿಸ್ಟರು ಕುರುಡಾಗಿ ವರ್ತಿಸಲು ಸಾಧ್ಯವಿಲ್ಲ. ಹಾಗೆಯೇ ಇದಕಾಗಿ ಜಾತೀಯ, ಮತೀಯ ವಿಚ್ಛಿದ್ರಕಾರಿ ಶಕ್ತಿಗಳ ಜೊತೆಯಲ್ಲಿ ಸೇರಲು ಕಮ್ಯುನಿಸ್ಟರು ತಯಾರಿಲ್ಲ. ○

ಚುನಾವಣೆಗಳಲ್ಲಿ ಹರಿಯುವ ಹಣದ ಹೊಳೆಯ ಮೂಲ

"ಚುನಾವಣೆಯ ಖರ್ಚಿಗಾಗಿ ಬೃಹತ್ ಬಂಡವಾಳಗಾರರತ್ತ ಕೈ ಚಾಚುವ ಕೆಲವು ರಾಜಕೀಯ ಪಕ್ಷಗಳಿಂದ ಆಬಂಡವಾಳಗಾರರು ನಡೆಸುವ ಮೋಸ ವಂಚನೆಗಳನ್ನು ಬಯಲಿಗೆಳೆಯುವುದಾಗಲೀ ಅವರ ವಿರುದ್ಧ ಕ್ರಮ ಕೈ ಗೊಳ್ಳುವುದಾಗಲೀ ಸಾಧ್ಯವಾಗುತ್ತದೆಯೇ? " ಎಂಬುದಾಗಿ ಮಾಜೀ ರಕ್ಷಣಾ ಸಚಿವ ವಿ.ಪಿ ಸಿಂಗ್ ಪ್ರತ್ಯೈಸಿದ್ದಾರೆ. ಕಾಂಗ್ರೆಸ್(ಐ) ನಾಯಕತ್ವವನ್ನು ಪರೋಕ್ಷವಾಗಿಯೂ ದೇಶದ ಕೆಲವು ಬೃಹತ್ ಸಂಸ್ಥೆಗಳು ನಡೆಸಿದ ಭಾರೀ ಮೋಸಗಳ ಕುರಿತು ಅವರು ನಿರ್ಧಿಷ್ಟವಾಗಿ ಎತ್ತಿ ಹೇಳಿದರು. ಮೇ 12 ರಂದು ಅಲಹಾಬಾದ್‌ನಲ್ಲಿ ನಡೆದ ಬಹಿರಂಗ ಸಭೆಯಲ್ಲಿ ಅವರು ಮಾತನಾಡಿದರು.

ಉದ್ಯಮಗಳು ಸಣ್ಣ ಪ್ರಮಾಣದ್ದಾಗಿರಲಿ, ಬೃಹತ್ ಪ್ರಮಾಣದ್ದಾಗಿರಲಿ ಅವುಗಳ ನಡವಳಿಕೆಗಳು ಪರಿಶುದ್ಧವಾಗಿಲ್ಲ. 1985 ರಲ್ಲಿ ನಾವು (ಹಣಕಾಸು ಇಲಾಖೆ) ಇವುಗಳ ವಿರುದ್ಧ ಹೋರಾಡ ನಡೆಸುವ ತೀರ್ಮಾನ ಕೈಗೊಂಡಾಗ ಎದುರಾಗಬಹುದಾದ ತೊಂದರೆಗಳನ್ನೆಲ್ಲಾ ನಿರೀಕ್ಷಿಸಿಯೇ ಇದ್ದೆವು

ದೊಡ್ಡವರ ಸಣ್ಣತನ

ಬಾಟಾ, ಬ್ರೂಕ್‌ಬಾಂಡ್, ಥಾಫರ್, ಕಿರ್ಲೋಸ್ಕರ್, ಟಾಟಾರವರ ವೋಲ್ಟಾಸ್, ಟಿ.ಸಿ.ಎಂ ಕೊಥಾರಿ, ರಿಲೆಯನ್ಸ್ ಮುಂತಾದ ಉದ್ಯಮಗಳಿಗೆ ಒಳ್ಳೆಯ ಹೆಸರಿರುವುದೇನೋ ನಿಜ ಆದರೆ ಅವುಗಳ ನಡವಳಿಕೆ ಸಮರ್ಪಕವಾಗಿಲ್ಲ. 1985 ರಲ್ಲಿ ಹಣಕಾಸು ಖಾತೆ ಈ ಉದ್ಯಮಗಳ ಬಗ್ಗೆ ತನಿಖೆಗೆ ಆರಂಭಿಸಿದಾಗ ನಮ್ಮ ಮೇಲಿನ ನಿರ್ಬಂಧಗಳುಹೆಚ್ಚಾಗಿ ನಮ್ಮ ಮಿತಿ ಸಂಕುಚಿತಗೊಂಡಿರುವುದು ನಮಗೆ ಸ್ಪಷ್ಟವಾಯಿತು. ಉದಾಹರಣೆಗೆ ನಾವು ಬಾಟಾ ಕಂಪೆನಿಯ ವ್ಯವಹಾರಗಳನ್ನು ತನಿಖೆ ಮಾಡಿದಾಗ ಅದರ ಜನರಲ್ ಮ್ಯಾನೇಜರ್ ಸಹಿಯಿದ್ದ ಪತ್ರವೊಂದನ್ನು ವಶಕ್ಕೆತೆಗೆದುಕೊಂಡೆವು. ಆ ಪತ್ರದಿಂದ ಬಾಟಾ ಕಂಪೆನಿ ಹೊರದೇಶಗಳಿಗೆ ರಫ್ತು ಮಾಡುವ ಪಾದರಕ್ಷೆಗಳಿಗೆ ಅಸಲೀ ರಬ್ಬರನ್ನು ಉಪಯೋಗಿಸುವುತ್ತಿಲ್ಲವೆಂಬುದು ಬಯಲಿಗೆ ಬಂತು. ಇದರಿಂದಾಗಿ ಬಾಟಾ ಕಂಪೆನಿ ವಿಪರೀತ ಲಾಭಗಳಿಸಿತು. ಈ ಲಾಭದ ಪ್ರಮಾಣ ವೆಷ್ಟೆಂಬುದನ್ನು 1 ಪತ್ರ ಸೂಚಿಸಿತು. ಒಂದು ವ್ಯಾಪಾರೀ ಸಂಸ್ಥೆ ದೇಶಕ್ಕಿಂತಲೂ ದೊಡ್ಡದಲ್ಲ ಅಲ್ಲವೇ.

ಬ್ರೂಕ್‌ಬಾಂಡ್ ಎಂಬ ದೊಡ್ಡ ಸಂಸ್ಥೆಯ ವ್ಯವಹಾರಗಳನ್ನು ನೋಡಿ; ಹೊರ ದೇಶಗಳಲ್ಲಿ ಜಾಹೀರಾತುಗಳನ್ನು ಮಾಡಬೇಕಾದ ವಿದೇಶೀ ವಿನಿಮಯವನ್ನು ಆ ಸಂಸ್ಥೆ ಪಡೆದುಕೊಂಡಿತು. ಆದರೆ ಆ ಹಣವನ್ನು ಆ ಕಂಪೆನಿ ವಿದೇಶದ ಬ್ಯಾಂಕುಗಳಲ್ಲಿ ಠೇವಣಿ ಮಾಡಿತು. ಈ ಕಂಪೆನಿಯ ದಸ್ತಾವೇಜುಗಳನ್ನು ಪರಿಶೀಲಿಸಿದಾಗ ಈ ಅಂಶ ಬೆಳಕಿಗೆ ಬಂದು ಕಂಪೆನಿ ತನ್ನ ತಪ್ಪನ್ನು ಒಪ್ಪಿಕೊಂಡಿತು.

ಸಿಗರೇಟ್ ಕಂಪೆನಿಯ ಭ್ರಷ್ಟಾಚಾರ

ಸಿಗರೇಟ್ ತಯಾರಿಸುವ ಬೃಹತ್ ಕಂಪೆನಿಯಾದ ಇಂಪೀರಿಯಲ್ ಟೊಬ್ಯಾಕೋ ಕಂಪೆನಿಯವರು ವಾಸ್ತವವಾಗಿ ಉತ್ಪಾದನೆಯಾಗುವುದಕ್ಕಿಂತ ಕಡಿಮೆ ಉತ್ಪತ್ತಿಯನ್ನು ಲೆಕ್ಕದಲ್ಲಿ ತೋರಿಸುವುದರ ಮೂಲಕ 125 ಕೋಟಿ ರೂಗಳ ತೆರಿಗೆಯನ್ನು ವಂಚಿಸಿತು.

ಥಾಪರ್‌ನ ಉದ್ಯಮದ ವ್ಯವಹಾರಗಳನ್ನು ನಾವು ತನಿಖೆ ಮಾಡಿದಾಗ ಆ ಬಗ್ಗೆ ಕೆಲವರು ಆಕ್ಷೇಪ ವ್ಯಕ್ತಪಡಿಸಿದರು. ಬಾಯಿಗೆ ಬಂದಹಾಗೆ ಮಾತಾಡಿದರು. ಆದರೆ ಕಂಪೆನಿ ತನ್ನ ಮೇಲಿನ 16 ಆಪಾದನೆಗಳಲ್ಲಿ 14 ಅನ್ನು ಒಪ್ಪಿಕೊಂಡಿತು.

ಏರ್ ಕಂಡಿಷನರ್‌ಗಳನ್ನು ತಯಾರಿಸುವ ವೋಲ್ಟಾಸ್ ಕಂಪೆನಿ ತೆರಿಗೆ ವಂಚನೆ ನಡೆಸಿರುವುದನ್ನು ಬಲವಾದ ಪುರಾವೆಗಳೊಂದಿಗೆ ಲೋಕಸಭೆಯ ಮುಂದೆ ಇಟ್ಟೆವು.

ಟಾಟಾ ಹೋಟೆಲ್‌ಗಳು

ಟಾಟಾ ಕಂಪನಿಗೆ ಸೇರಿದ ಭಾರೀ ಹೋಟೆಲ್‌ಗಳು ವಿದೇಶಗಳಲ್ಲಿವೆ. ನಮ್ಮ ದೇಶದಲ್ಲಿ ಸಂಪಾದಿಸಿದ ಹಣದಿಂದಲೇ ಈ ಹೋಟೆಲ್‌ಗಳನ್ನು ಕಟ್ಟಲಾಗಿದೆ. ಆದ್ದರಿಂದ ಈ ಹೋಟೆಲ್‌ಗಳಿಂದ ಬರುವ ವರಮಾನ ನಮ್ಮ ದೇಶಕ್ಕೆ ಸೇರಬೇಕೆಂದು ನಾವು ಒತ್ತಾಯಿಸಿ ಕ್ರಮ ಕೈಗೊಂಡೆವು [ವಿ. ಪಿ. ಸಿಂಗ್ ಮತ್ತು ಹಣಕಾಸು ಖಾತೆ ಅಧಿಕಾರಿಗಳು] ಈ ಬಗೆಗಿನ ವಿಚಾರಣೆ ಈಗ ತಾನೇ ಆರಂಭಗೊಂಡಿವೆ ಇದು ನನಗೆ ಸಂತೋಷವೇ.

ಈ ಉದ್ಯಮಗಳೆಲ್ಲಾ ತೆರಿಗೆ ಹಣವನ್ನು ವಂಚಿಸಿದ್ದು ಮಾತ್ರವಲ್ಲ. ಲಾಭದ ಹಣವನ್ನು ದೇಶದಿಂದ ಹೊರಗೆ ಸಾಗಿಸುತ್ತಿದ್ದಾರೆ. ಈ ಹಣ ನಮ್ಮ ದೇಶದ ಬಡ ಜನತೆಗೆ ದೊರೆಯಬೇಕು. ನಮ್ಮ ಬಡಜನರ ಹೊಟ್ಟೆಯ ಮೇಲೆ ಹೊಡೆದು ಅವರ ಅನ್ನವನ್ನು ಈ ಕಂಪೆನಿಗಳು ಕಸಿದು ತಿನ್ನುತ್ತಿವೆ.

ಬಿರ್ಲಾನ ಕುತಂತ್ರ

ನಾವು ತನಿಖೆಯನ್ನು ಆರಂಭಿಸಿದ ಒಡನೆಯೇ ಬಿರ್ಲಾ ಕಂಪೆನಿಯವರು ವಿದೇಶೀ ಕಂಪೆನಿಯಲ್ಲಿ ತೊಡಗಿಸಿದ್ದ ಷೇರು ಹಣವನ್ನು ವಾಪಸ್ಸು ತೆಗೆದುಕೊಂಡರು. ಇದಕ್ಕೆ ಸಂಬಂಧಿಸಿದ ದಸ್ತಾವೇಜುಗಳನ್ನು ನಾವು ಕೇಳಿದಾಗ "ನಾವು ಆ ಕಂಪೆನಿಯಲ್ಲಿ ಪಾಲುದಾರರಿಗೆ ಮುಂದುವರಿಸಿದ್ದೇವೆ. ಹಿರಿಯ ಪಾಲುದಾರರ ಅನುಮತಿಯಿಲ್ಲದೆ ನಮ್ಮ ದಸ್ತಾವೇಜುಗಳನ್ನು ಕೊಡಿಸುವುದು ಹೇಗೆ ಸಾಧ್ಯ" ಎಂದು ಹೇಳಿ ಜಾರಿಕೊಂಡರು.

ಕಪ್ಪುಹಣ ಎಂಬುದು ದೇಶದ ಅರ್ಥ ವ್ಯವಸ್ಥೆಯಲ್ಲಿ ಒಂದಲ್ಲ ಒಂದು ರೂಪದಲ್ಲಿ ಹಾನಿಯುಂಟು ಮಾಡಿಯೇ ತೀರುತ್ತದೆ. ಹೊರ ದೇಶಗಳಲ್ಲಿ ಲಾಭ ಬರುವುದು ಗೊತ್ತಾದೊಡನೆ ಬಂಡವಾಳಶಾಹಿಗಳು ನಮ್ಮ ದೇಶದ ಅರ್ಥ ವ್ಯವಸ್ಥೆಯನ್ನು ದುರ್ಬಲಗೊಳಿಸಿ ಬೇರೆ ದೇಶಗಳ ಅರ್ಥವ್ಯವಸ್ಥೆಯನ್ನು ಬಲಪಡಿಸಲು ಧಾವಿಸುತ್ತಾರೆ. ಇದು ಹೇಗಿದೆಯೆಂದರೆ ಒಬ್ಬನ ರಕ್ತವನ್ನು ಹೀರಿ ಮತ್ತೊಬ್ಬನಿಗೆ ಕೊಟ್ಟಂತೆ. ಇಂಥವರು ದೇಶ ದ್ರೋಹಿಗಳು.

ಈ ಬಂಡವಾಳಶಾಹಿಗಳು ಕೇವಲ ಆರ್ಥಿಕ ಶಕ್ತಿಯನ್ನಷ್ಟೇ ಅಲ್ಲದೆ ರಾಜಕೀಯ ಶಕ್ತಿಯೂ ತಮ್ಮ ಕೈಗೇ ಬರಬೇಕು ಎಂದು ಆಸೆಪಡುತ್ತಾರೆ. ಇದರ ವಿರುದ್ಧವಾಗಿ ನಾವು ಒಂದೇ ಒಂದು ಹೆಜ್ಜೆ ಮುಂದಿಟ್ಟರೂ ಅವರು ಅದರ ವಿರುದ್ಧವಾಗಿ ಅಪಾರ ಶಕ್ತಿಯನ್ನು ಪ್ರಯೋಗಿಸುತ್ತಾರೆಂಬುದು ನನಗೆ ತಿಳಿದಿದೆ. ಆದರೂ ಕೂಡ ದೇಶದ ಒಳಿತಿಗಾಗಿ ನಾವು ಹೋರಾಡಲೇ ಬೇಕಾಗಿದೆ.

ಕೇಂದ್ರ ಸಂಪುಟದಿಂದ ಹೊರಹಾಕಲ್ಪಟ್ಟ ವಿ.ಪಿ. ಸಿಂಗ್, ಇಂದು ಉತ್ತರ ಪ್ರದೇಶದ ಎಲ್ಲೆಡೆ ಅಡ್ಡಾಡಿ ತಮ್ಮ ಜೊತೆಗಾರರ ಭ್ರಷ್ಟಾಚಾರವನ್ನು ಬಯಲಿಗೆಳೆಯುತ್ತಿದ್ದಾರೆ.

ಈ ಆರ್ಥಿಕ ಅಪರಾಧಗಳ ತನಿಖೆಗಾಗಿ ಒಂದು ಆಯೋಗವನ್ನು ರಚಿಸಬೇಕು. ಸತ್ಯಗಳನ್ನು ಜನತೆಯ ಮುಂದೆ ಬಹಿರಂಗಪಡಿಸಬೇಕು.

ಸುಳ್ಳು ಪ್ರಕಟನೆಗಳು

ರಾಜಕೀಯದಲ್ಲಿ ಹಣದ ಪ್ರಭಾವವನ್ನು ಕಡಿಮೆ ಮಾಡುವುದಾಗಿ ಪ್ರಧಾನಿಯವರು ಪಾರ್ಲಿಮೆಂಟಿನಲ್ಲಿ ತಿಳಿಸಿದಾರೆ. ಆದರೆ ನಿಜವಾದ ಸಮಸ್ಯೆಯನ್ನು ನಾವು ಅರಿಯುದವರೆಗೆ ಪರಿಹಾರ ಹುಡುಕುವುದು ಅಸಾಧ್ಯವಾಗುತ್ತದೆ. ಬರಿಯ ಸುಳ್ಳು ಘೋಷಣೆಗಳನ್ನು ಕೈಬಿಟ್ಟು ರಾಜಕೀಯಕ್ಕೂಮತ್ತು ಚುನಾವಣೆಗಳಿಗೂ ಹಣದ ಹೊಳೆ ಎಲ್ಲಿಂದ ಹರಿದು ಬರುತ್ತದೆಂಬುದರ ಬಗ್ಗೆ ಚಿಂತಿಸಬೇಕಾದ ಸಂದರ್ಭ ಬಂದಿದೆ.

ನಾನೀಗ ಮಂತ್ರಿಯಲ್ಲಿ ಬರೀ ಪಾರ್ಲಿಮೆಂಟಿನ ಸದಸ್ಯ ಆದ್ದರಿಂದ ಕೊಂಚ ಸ್ಪಷ್ಟವಾಗಿಯೇ ಮಾತನಾಡಲು ಇಚ್ಚಿಸುತ್ತೇನೆ. ಸಾಮಾನ್ಯವಾಗಿ ಬಹುತೇಕ ಪಕ್ಷಗಳು ಚುನಾವಣೆಯ ಖರ್ಚು ವೆಚ್ಚಗಳಿಗಾಗಿ ಬಂಡವಾಳಶಾಹಿಗಳನ್ನೇ ಅವಲಂಬಿಸಿದೆ. ಇದಕ್ಕೆ ಬದಲಾಗಿ ಚುನಾವಣಾ ತೆರಿಗೆಗಳನ್ನೇ ಹಾಕಿದರೆ ಒಳ್ಳೆಯದೆನಿಸುತ್ತದೆ.

ಒಂದು ಸರ್ಕಾರ ಒಂದು ಕೈಯಲ್ಲಿ ಕತ್ತಿಯನ್ನೂ ಮತ್ತೊಂದು ಕೈಯಲ್ಲಿ ಭಿಕ್ಷಾಪಾತ್ರೆಯನ್ನೂ ಹಿಡಿದುಕೊಂಡಿರಲು ಸಾಧ್ಯವೇ? ಹಣಕ್ಕಾಗಿ ಯಾರ ಮುಂದೆ ಭಿಕ್ಷಾಪಾತ್ರೆಯನ್ನು ಚಾಚಲಾಗುವುದೋ ಅವರ ವಿರುದ್ಧ ಕತ್ತಿಯನ್ನು ಝಳಪಿಸುವುದು ಸಾಧ್ಯವೇ? ಮಾದಕ ಪಾನೀಯಗಳ ಮೇಲೆ ಶೇ. 1ರಷ್ಟು ತೆರಿಗೆ ಹಾಕಿದರೂ ಸಾಕು ಎಲ್ಲಾ ರಾಜಕೀಯ ಪಕ್ಷಗಳಿಗೂ ಚುನಾವಣಾ ಖರ್ಚಿಗೆ ಹಣ ಒದಗಿಸಬಹುದು. ಕತ್ತಿಯನ್ನು ಝಳಪಿಸಿಯೇ ಈ ಹಣವನ್ನು ಪಡೆಯಬಹುದು. ಭಿಕ್ಷಾಪಾತ್ರೆಯನ್ನು ಚಾಚಬೇಕಾಗಿಲ್ಲ. ಇದೊಂದೇ ಉಳಿದಿರುವ ದಾರಿಯೆಂದು ನಾನು ಹೇಳುವುದಿಲ್ಲ. ಇದಕ್ಕಿಂತ ಉತ್ತಮ ಮಾರ್ಗಗಳೂ ಇರಬಹುದು.

ಹೀಗೆ ತೆರಿಗೆಯ ಮೂಲಕ ಹಣ ವಸೂಲಿ ಮಾಡಿ ಚುನಾವಣೆಯ ಖರ್ಚಿಗೆ ಹಣ ಒದಗಿಸಿದ ನಂತರವೂ ಕೆಲವು ರಾಜಕೀಯ ಪಕ್ಷಗಳು ಬಂಡವಾಳಶಾಹಿಗಳಿಂದ ಹಣ ಪಡೆಯುವುದಿಲ್ಲವೆಂಬುದಕ್ಕೆ ಗ್ಯಾರಂಟಿಯೇನು ಎಂದು ಕೆಲವರು ಕೇಳಬಹುದು. ಆದರೆ ಸರ್ಕಾರ ಈ ರೀತಿಯ ಕ್ರಮ ಕೈಗೊಂಡರೆ 'ನಮಗೆ ಬೇರೆ ದಾರಿಯಿಲ್ಲ'ಎಂಬುದಾಗಿ ಆ ಪಕ್ಷಗಳು ನೆಪ ಹೇಳಲು ಸಾಧ್ಯವಾಗಲಾರದು. ಅಲ್ಲವೇ?

ಪಕ್ಷಗಳಿಗೆ ಹಣದ ಮೂಲ:

ಕೆಲವು ಪಕ್ಷಗಳು ನಿಧಿ ಸಂಗ್ರಹಕ್ಕಾಗಿ ಏನೆಲ್ಲಾ ತಿಪ್ಪರಲಾಗ ಹಾಕುತ್ತವೆಂದು ಗೊತ್ತೇ? ಗಂಗಾನದಿಯನ್ನು ಶುದ್ಧೀಕರಣಗೊಳಿಸುವುದಾಗಿ ಹೇಳಿಕೊಂಡು ಆ ನದಿಯ ಕೊಳೆ ನೀರನ್ನು ನಿರ್ದಿಷ್ಟಪಕ್ಷದ ತೊಟ್ಟಿಯೊಳಗೆ ಹರಿಸಲಾಗುತ್ತದೆ. ನಂತರ ಅದೇ ನೀರನ್ನು ಶುದ್ಧೀಕರಿಸಲಾಗಿದೆಯೆಂದು ಹೇಳಿ ಆ ತೊಟ್ಟಿಯ ನೀರನ್ನು ಹೊರಬಿಟ್ಟು ನೀರನ್ನು ಹಿಡಿದವರಿಂದ ಪ್ರಕಟಿಸಲ್ಪಡುತ್ತದೆ.

ಈ ರೀತಿಯಲ್ಲಿ ಸಂಗ್ರಹಿಸಲಾಗುವ ನಿಧಿಯಿಂದಲೇ ಚುನಾವಣೆಯಲ್ಲಿ ಸ್ಪರ್ಧಿಸುತ್ತಿದ್ದೇವೆ ಎನ್ನುವುದಾದರೆ ಇಂತಹ ನಡವಳಿಕೆಯನ್ನು ನಾವು ಬೆಳೆಸುತ್ತಿದ್ದೇವೆ ಎಂದು ಅರ್ಥವಲ್ಲವೇ?

ಫೇರ್‌ಫಾಕ್ಸ್ ವ್ಯವಹಾರಗಳ ಬಗ್ಗೆ ಒಂದು ಕಮಿಷನ್ ನೇಮಿಸಲಾಗಿದೆ. ಆದುದರಿಂದ ನಾನು ಅದರ ಬಗ್ಗೆ ಹೆಚ್ಚಿಗೆ ಹೇಳುವುದಿಲ್ಲ.

ರಿಲೆಯನ್ಸ್ ಪ್ರಕರಣ :

ರಿಲೆಯನ್ಸ್ ಕಂಪನಿಯ ವ್ಯವಹಾರಗಳೇನು? ತನ್ನ ಒಡೆತನದ ಬೇರೆ ಕಂಪನಿಗಳ ಷೇರುಗಳನ್ನು ಲೆಕ್ಕತೋರಿಸಿ ಬ್ಯಾಂಕ್‌ಗಳಿಂದ ರಿಸರ್ವ್‌ಬ್ಯಾಂಕ್‌ನ ನಿಯಮಗಳಿಗೆ ವಿರುದ್ಧವಾಗಿ ಅಪಾರ ಹಣವನ್ನು ಸಾಲ ತೆಗೆದುಕೊಂಡಿತು. ನಂತರ ರಿಸರ್ವ್‌ಬ್ಯಾಂಕ್‌ನ ಆಜ್ಞೆಯ ಪ್ರಕಾರ 62ಕೋಟಿ ರೂ.ಗಳನ್ನು ಸಂಸ್ಥೆ ಹಿಂದಿರುಗಿಸಿತು.

ಅದಾದ ನಂತರ ಹೊರದೇಶಗಳಿಂದ 8ಯಂತ್ರಗಳನ್ನು ತಂದಿತು. ಈ ವಿಷಯವನ್ನು ಎತ್ತಿತೋರಿಸಿದಾಗ 'ವಾಸ್ತವವಾಗಿ ನಾವು 8ಯಂತ್ರಗಳನಷ್ಟೇ ತಂದೆವು ಆದರೆ ನೋಡುವುದಕ್ಕೆ 21 ಯಂತ್ರಗಳಂತೆ ಕಾಣಿಸಿವೆ ಅಷ್ಟೇ'ಎಂಬುದಾಗಿ ರಿಲೆಯನ್ಸ್ ಹೇಳಿತು. ನಂತರ ತಜ್ಞರ ತಂಡವೊಂದು ಈ ಬಗ್ಗೆ ಪರಿಶೀಲನೆ ನಡೆಸಿ 12ಯಂತ್ರಗಳಿವೆಯೆಂಬುದಾಗಿ ವರದಿ ಮಾಡಿತು. 8ಯಂತ್ರಗಳಿಗೆ ಬದಲಾಗಿ 12ಯಂತ್ರಗಳನ್ನು ರಿಲೆಯನ್ಸ್ ಕಂಪನಿ ತಯಾರಿಸಿದೆ ಎಂದರೆ ಈ ಕಂಪನಿ ವಿದೇಶಗಳಲ್ಲಿ ಹಣವನ್ನು ಇಟ್ಟಿರಬೇಕು ಅಲ್ಲವೇ?

ಇದಾದ ನಂತರ 23 ಅಥವಾ 30 ಕೋಟಿ ರೂ.ಗಳ ಮೌಲ್ಯದ ವಿದ್ಯುತ್ ಉತ್ಪಾದನಾ ಯಂತ್ರವೊಂದನ್ನು ರಿಲೆಯನ್ಸ್ ಕೊಂಡುಕೊಂಡಿತು. 'ಈ ಯಂತ್ರ ನಮಗೆ ಉಚಿತ ಕೊಡುಗೆಯಾಗಿ ಬಂದಿದೆ' ಎಂದು ಕಂಪನಿ ಹೇಳಿತು. ಅಷ್ಟೊಂದು ಬೃಹತ್ತಾದ ವಿದ್ಯುತ್ ಉತ್ಪಾದನಾ ಕೇಂದ್ರವನ್ನು ಯಾರಾದರೂ ಉಚಿತವಾಗಿ ನೀಡಲು ಸಾಧ್ಯವೇ? ಆದ್ದರಿಂದಲೇ ಈ ಸಂಸ್ಥೆಯು ವಿದೇಶದಲ್ಲಿ ಹಣ ಇಟ್ಟಿದ್ದರೆಂಬುದು ಸ್ಪಷ್ಟವಾಗುತ್ತದೆ.

ರಿಸರ್ವ್‌ಬ್ಯಾಂಕ್ ಅಧಿಕಾರಿಗಳು ನಡೆಸಿದ ತನಿಖೆಯಿಂದ ವಿದೇಶೀ ವಿನಿಮಯವನ್ನು ಉಪಯೋಗಿಸಿಕೊಂಡು ಯಂತ್ರಗಳನ್ನು ಈ ಕಂಪನಿ ಕ್ರಯಕ್ಕೆ ತೆಗೆದುಕೊಂಡಿರುವುದು ತಿಳಿದು ಬಂದಿದೆ. ಆದರೆ ಕಂಪನಿಯವರು ನೀಡಿರುವ ಲೆಕ್ಕಪತ್ರಗಳಲ್ಲಿ ಈ ಬಗೆಗಿನ ವಿವರಗಳು ದೊರೆತಿಲ್ಲ. ಈಗ ಈ ಎಲ್ಲಾ ವ್ಯವಹಾರಗಳ ಬಗ್ಗೆ ವಿಚಾರಣೆ ನಡೆಸಲು ಥಕ್ಕರ್ ಆಯೋಗವನ್ನು ನೇಮಿಸಲಾಗಿದೆ. ವಾಸ್ತವವಾಗಿ ಆರ್ಥಿಕ ಅಪರಾಧಿಗಳನ್ನು ಹಿಡಿಯಬೇಕಾಗಿರುವುದೇ ಇಂದಿನ ಪ್ರಶ್ನೆಯಾಗಿದೆ. ಆದರೆ ಥಕ್ಕರ್ ಆಯೋಗ ಈ ಕುರಿತು ವಿಚಾರಣೆ ನಡೆಸದೆ ಮೂಲ ಪ್ರಶ್ನೆಯಿಂದ ಹಿಂದಕ್ಕೆ ಸರಿಯುತ್ತಿದೆ.

ಕಾರ್ಮಿಕರಿಗೆ ಗೊತ್ತು

ಕೊನೆಯದಾಗಿ ಒಂದು ವಿಷಯವನ್ನು ಹೇಳಲು ನಾನು ಇಚ್ಛಿಸುತ್ತೇನೆ. ಬಂಡವಾಳಶಾಹಿಗಳನ್ನು ಎದುರಿಸಿ ಹೋರಾಡಲು ಕಾರ್ಮಿಕರೂ ಯುವ ಜನರೂ ಮುಂದೆ ಬರಬೇಕು. ಸ್ವಾರ್ಥ ಭಾವನೆಯಿಂದ ಇದನ್ನು ಸಾಧಿಸಲಾಗುವುದಿಲ್ಲ. ಕಾರ್ಮಿಕರೂ ಮತ್ತು ಯುವಕರಿಂದಲೇ ಇದು ಸಾಧ್ಯ. ಏಕೆಂದರೆ ಬಂಡವಾಳಶಾಹಿಗಳು ನಡೆಸುವ ತೆರಿಗೆಗಳ್ಳತನ ಕಾರ್ಮಿಕರಿಗೇ ತಿಳಿಯುತ್ತದೆ.

ನಮ್ಮ ಸೆರೆಮನೆಗಳನ್ನು ನೋಡಿದರೆ ಬಡತನದ ರೇಖೆಗಿಂತ ಕೆಳಗಿರುವವರೇ ಕಂಡುಬರುತ್ತಾರೆ. ತುಂಬಿ ತುಳುಕುವ ಗಲ್ಲಾ ಪೆಟ್ಟಿಗೆಗಳ ಮುಂದೆ ಕುಳಿತುಕೊಳ್ಳುವಂತವರು ಸೆರೆಮನೆಗಳಲ್ಲಿರುವುದಿಲ್ಲ.

ನ್ಯಾಯಾಲಯಗಳು, ಆಡಳಿತಾಂಗ, ಪೊಲೀಸ್ ಪಡೆ ಇವುಗಳೆಲ್ಲಾ ಕೆಲಸ ಮಾಡುತ್ತಿದ್ದರೂ ಕೂಡ ಪರಿಸ್ಥಿತಿ ಹೀಗಿದೆ. ಈ ವ್ಯವಸ್ಥೆಯನ್ನು ಎದುರಿಸಿ ನಾವು ಹೋರಾಡಲೇಬೇಕಿದೆ....

ಹೀಗೆ ಮಾತನಾಡಿದ್ದು ಮಾಜೀ ರಕ್ಷಣಾ ಸಚಿವ ಶ್ರೀ ವಿ.ಪಿ. ಸಿಂಗ್.

REG No. BGW-148 MAG (2) PRB DECR 319/-78-79

ಮುಖ್ಯಮಂತ್ರಿ ಉತ್ತರಿಸಲಿ

(1ನೇ ಪುಟದಿಂದ)

ಪ್ರಜಾಪ್ರಭುತ್ವದ ಕುರಿತು ಸಂಶಯವನ್ನುಂಟು ಮಾಡಿದೆ. ಅಧಿಕಾರದ ವಿಕೇಂದ್ರಿಕರಣದ ಮೂಲಕ ಸಾಮಾನ್ಯ ಗ್ರಾಮಾಂತರದ ಬಡ ಜೀವಿಗಳ ಜೀವನ ನೆಮ್ಮದಿಯಾಗುವುದು ಎಂದು ಈ ಜಿಲ್ಲಾ ಪರಿಷತ್ ಮತ್ತು ಮಂಡಲ್ ಪಂಚಾಯತ್‌ಗಳ ಕುರಿತು 'ಪಠಾಕ್' ಹೇಳುತ್ತಿದ್ದ ಮಂತ್ರಿ ನಜೀರ್ ಸಾಹೇಬರ ಬಾಯಿಯೇ ಬಂದಾದಂತಾಗಿದೆ. ಮಾತ್ರವಲ್ಲ, ಈ ಚುನಾವಣೆಗಳ ವೇಳೆ ರಾಜ್ಯದಾದ್ಯಂತ ಪ್ರಚಾರವಾಗಿ ರೂ. 900 ಕೋಟಿಯಷ್ಟು ಹಣವನ್ನು "ನಾವು ಜಿಲ್ಲಾ ಪರಿಷತ್ ಮತ್ತು ಮಂಡಲ್ ಪಂಚಾಯತ್‌ಗಳ ವೆಚ್ಚಕ್ಕೆ ತೆಗೆದಿರಿಸಿದ್ದೇವೆ"ಎಂದು ಹೇಳಿದ ರಾಮಕೃಷ್ಣ ಹೆಗ್ಡೆಯವರಿಗೆ ಈಗ ಜನ ಮರು ಸವಾಲ್ ಹಾಕುತ್ತಿದೆ. ಎಲ್ಲಿವೆ ಹಣ ? ಯಾಕೆ ಈ ಸಂಸ್ಥೆಗಳು ಅಂಗೀಕರಿಸಿ ಖಜಾನೆ ಕಳುಹಿಸಿದ ಬಿಲ್ಲುಗಳು ಹಾಗೆಯೇ ವಾಪಸ್ಸು ಬರುತ್ತಿವೆ?

ಮೂರನೆಯದಾಗಿ, "5ವರ್ಷ ಕಾಲದೊಳಗೆ ಕ್ಯಾಪಿಟೇಶನ್ ಫೀಸ್ ಪಿಡುಗಿನಿಂದ ವಿದ್ಯಾಭ್ಯಾಸ ಕ್ಷೇತ್ರವನ್ನು ವಿಮೋಚನೆ ಮಾಡುತ್ತೇವೆ" ಎಂದು 1983ರಲ್ಲಿ ರಾಜ್ಯದ ಜನತೆಗೆ ಜನತಾ ಪಕ್ಷವು ಅಧಿಕಾರಕ್ಕೇರಿದ ಸಮಯದಲ್ಲಿ ಕೊಟ್ಟ ಭರವಸೆ. ಅದರ ಗತಿ ಏನಾಯಿತು ? ಎಂದು ಜನ ಕೇಳುತ್ತಿದ್ದಾರೆ. ಮೊದಲಿನ ಎರಡು ವರ್ಷ ಈ ಕುರಿತು ಸರಕಾರವು ಗಂಭೀರ ಇಚ್ಛೆವುಳ್ಳದಾಗಿದೆ ಎಂದಿದ್ದರೂ, ಆನಂತರವಂತೂ ಸರಕಾರ ಈ ಬಗ್ಗೆ ಆಂತರಿಕವಾಗಿ ತಮ್ಮ ಧೋರಣೆಯನ್ನು ಬದಲು ಮಾಡಿದಂತಿದೆ. ಎಲ್ಲೆಡೆ ಕ್ಯಾಪಿಟೇಶನ್ ಫೀನ ತಾಂಡವ ನಡೆಯುತ್ತಿದೆ–ಎಲ್.ಕೆ.ಜಿ.ಕ್ಲಾಸ್‌ನಿಂದ ಹಿಡಿದು, ಮೆಡಿಕಲ್, ಇಂಜಿನಿಯರಿಂಗ್ ಕಾಲೇಜಿನವರೆಗೆ.

ಮಾತ್ರವಲ್ಲ, ಅಂಬೇಡ್ಕರ್ ಮೆಡಿಕಲ್ ಖಾಸಗೀ ಕಾಲೇಜು 9ವರ್ಷಗಳಿಂದ ಅಧಿಕ ಮಟ್ಟದ ಕ್ಯಾಪಿಟೇಶನ್‌ಫೀಸ್ ವಸೂಲಿ ಮಾಡಿಯೂ ವಿದ್ಯಾರ್ಥಿಗಳಿಗೆ ಆಸ್ಪತ್ರೆ ವ್ಯವಸ್ಥೆ ಮಾಡಿಕೊಡದಿರುವುದನ್ನು ಖಂಡಿಸಿ,ಆ ಮೆನೇಜುಮೆಂಟನ್ನು ತರಾಟೆಗೆ ತೆಗೆದುಕೊಳ್ಳುವ ಬದಲು, ಸರ್ಕಾರಿ ಮೆಡಿಕಲ್ ಕಾಲೇಜಿಗೆ ಧಕ್ಕೆ ಬಂದರೂ ಚಿಂತೆಯಿಲ್ಲ, ಬೌರಿಂಗ್ ಸರ್ಕಾರಿ ಆಸ್ಪತ್ರೆಯನ್ನು ಹೆಚ್ಚು ಕಡಿಮೆ ಅಂಬೇಡ್ಕರ್ ಖಾಸಗೀ ಮೆಡಿಕಲ್ ಕಾಲೇಜಿಗೆ ಧಾರೆ ಎರೆದುಕೊಟ್ಟಿದೆ. ಈ ಜನತಾ ಸರ್ಕಾರ. ವಿದ್ಯಾರ್ಥಿಗಳು ಪ್ರಕ್ಷೋಭೆ ನಡೆಸುತ್ತಿದ್ದಾರೆ. ಮೆಡಿಕಲ್ ಕೌನ್ಸಿಲ್ ಛೀಮಾರಿ ಹಾಕಿದೆ.

ಇಂಗ್ಲಿಷ್‌ಮಾಧ್ಯಮದ ಶಾಲೆಗಳು'ನಾಯಿಕೊಡೆ'ಗಳಂತೆ ಐನೂರು, ಸಾವಿರಸಂಖ್ಯೆಯಲ್ಲಿಹುಟ್ಟಿಕೊಳ್ಳುತ್ತಿರುವುದನ್ನು ಕಂಡರೆ ಕ್ಯಾಪಿಟೇಶನ್ ಫೀಸ್‌ಪಿಡುಗು ಎಷ್ಟುತೀವ್ರವಾಗಿ ಬೆಳೆದು ರಾಮಕೃಷ್ಣ ಹೆಗ್ಡೆಯವರ 'ಕನ್ನಡ ಪರ' ನೀತಿಯ ಬುಡವನ್ನೇ ಕತ್ತರಿಸಿ ಹಾಕುವಂತಾಗುತ್ತಿದೆ.

ನಾಲ್ಕನೇಯದಾಗಿ, 'ಲಂಚರುಷುವತ್ತು'ನ ವಿಚಾರದಲ್ಲಿ 1983 84 ಕಾಲದಲ್ಲಿ ಬಿಗುವರ್ತನೆ ತಳೆದು ರಾಜ್ಯದ ಜನತೆಯ ಶಿಫಾರಸ್ಸಿಗೆ (ಚಿಂತೆಯಿಲ್ಲ, ಜನತಾ ಸರ್ಕಾರವು ಕಾಂಗ್ರೆಸ್[ಐ] ಸರ್ಕಾರಕ್ಕಿಂತ ಈ ವಿಷಯದಲ್ಲಿ ಅಧಿಕ ಸ್ವಚ್ಛವಾಗಿದೆ ಎಂಬ ಶಿಫಾರಸ್ಸು ಒಳಗಾಗಿದ್ದರೂ, ಆಮೇಲೆ, ಈಗ ಈ ವಿಷಯದಲ್ಲಿ ಜನತಾ ಸರ್ಕಾರವು ಕೆಟ್ಟ ಹೆಸರು ಪಡೆಯುತ್ತಿದೆ.

ಜನತಾದ ಹಿರಿಯ ಮುಖಂಡ ಶ್ರೀಮಾನ್ ನಿಜಲಿಂಗಪ್ಪನವರ ಇತ್ತೀಚೆಗಿನ ಹೇಳಿಕೆಯ ನಂತರವಾದರೂ ಜನತಾ ಪಕ್ಷದವರು ಕಣ್ಣು ತೆರೆಯುವರೇ ಎಂದು ಕಾದುನೋಡಬೇಕಾಗಿದೆ. (ಮಿತ್ರ ಪಕ್ಷಗಳ ಸಲಹೆಯಂತೂ ಜನತಾ ಪಕ್ಷಕ್ಕೆ ಬೇಡವಾಗಿದೆ.)

ಬೆಂಗಳೂರಿನಲ್ಲಿ 'ಹಸಿರು ಪಟ್ಟಿ'ಎಂದು ಗುಮ್ಮತೋರಿಸಿ ಸಾವಿರಾರು ಬಡ ಕುಟುಂಬಗಳಿಗೆ ಒಂದು ಇಂಚು ಭೂಮಿಯೂ ದೊರೆಯದಂತೆ ಮಾಡಲಾಗುತ್ತಿದ್ದರೂ, ಸಾವಿರಾರು ಚದರಡಿಯಷ್ಟು ಭೂಮಿ ಹೇರಳ ಧನವಂತರ ಕೈಗಳಿಗೆ ಹೋಗುತ್ತಿದೆ.

ಈ ಪರಿಸ್ಥಿತಿಯಲ್ಲಿ ಕರ್ನಾಟಕ ರಾಜ್ಯದ ಸಿ.ಪಿ.ಐ.(ಎಂ)ಪಕ್ಷದ ಸೆಕ್ರೆಟಾರಿಯೇಟ್ ಶ್ರೀ ರಾಮಕೃಷ್ಣ ಹೆಗ್ಡೆಯವರ ಮೂಲಕ ಜನತಾ ಪಕ್ಷಕ್ಕೆ ಒಂದು ಎಚ್ಚರಿಕೆಯನ್ನು ಕೊಡಬಯಸುತ್ತದೆ.

ಶ್ರೀ ರಾಮಕೃಷ್ಣ ಹೆಗ್ಡೆಯವರು ತಮ್ಮ ಪಕ್ಷದ ಕೆಲವು ಅತೃಪ್ತ ಎಂ. ಎಲ್. ಎ.ಗಳನ್ನು ತೃಪ್ತಿ ಮಾಡಿದರೆ ಸಾಲದು, ರಾಜ್ಯದ ಜನತೆಯು ಎತ್ತಿರುವ ಈ ಪ್ರಮುಖ ಪ್ರಶ್ನೆಗಳಿಗೆ ಸಮಾಧಾನಕರ ಉತ್ತರ ಕೊಡಬೇಕಾಗಿದೆ. ಬರೀ ಉತ್ತರವಲ್ಲ ಜನತೆಗೆ ಬೇಕಾದುದ್ದು ಕಾರ್ಯಬೇಕಾಗಿದೆ.

ಬೋಫೋರ್ಸ್ ಹಗರಣ – ಕೊನೆಗೂ ಸಂಸದೀಯ ಸಮಿತಿ

(1ನೇ ಪುಟದಿಂದ)

ವ್ಯಕ್ತಿ"ಗಳ ಬಗ್ಗೆ ಪೂರ್ಣ ಮಾಹಿತಿ ಪ್ರಕಟಿಸುವಂತೆ ಬೋಫೋರ್ಸ್ ಸಂಸ್ಥೆಯ ಮೇಲೆ ಒತ್ತಾಯತರಲು ಸ್ವೀಡನ್ ಸರ್ಕಾರವನ್ನು ಭಾರತ ಸರ್ಕಾರ ಅಧಿಕೃತವಾಗಿ ವಿನಂತಿಸಿಕೊಳ್ಳಬೇಕು. ಇದಲ್ಲದೆ ಆಡಿಟ್‌ಬ್ಯೂರೋದ ವರದಿಯಲ್ಲಿ ಹೇಳಿದ ಸ್ವಿಸ್ ಕಂಪನಿಯ ಬಗ್ಗೆ, ಸ್ವಿಸ್ ಬ್ಯಾಂಕ್ ಖಾತೆಗಳ ಬಗ್ಗೆ ಮಾಹಿತಿ ಪಡೆಯಲು ಸ್ವಿಟ್ಝರ್ಲೆಂಡ್ ಸರ್ಕಾರದ ಸಹಕಾರ ಕೋರಬೇಕು.

ಲಂಚ, ಬಡಮೋಲು ಕೃತ್ಯ, ಬ್ಲಾಕ್ ಮೇಲ್ ಪಾಶ್ಚಿಮಾತ್ಯ ದೊಡ್ಡ ಶಸ್ತ್ರಾಸ್ತ್ರ ತಯಾರಕರೊಡನೆ ಮತ್ತು ಬಹು ರಾಷ್ಟ್ರೀಯ ಕಂಪೆನಿಗಳೊಂದಿಗೆ ನಡೆಸುವ ವ್ಯವಹಾರಗಳ ವಿಭಿನ್ನ ಅಂಗಗಳು. ಭಾರತದ ಪ್ರಭುತ್ವ ಮತ್ತು ಅದರ ಸಿಬ್ಬಂದಿ ಕೂಡಾ ಈಗ ಸಾಮ್ರಾಜ್ಯಶಾಹೀ ದೊಡ್ಡ ವ್ಯಾಪಾರಸ್ತರ ಕಕ್ಷೆಯೊಳಗೆ ಬಂದಿದ್ದಾರೆ, ಎಂಬುದಕ್ಕೆ ಬೋಫೋರ್ಸ್ ಹಾಗೂ ಸಬ್ ಮೇರಿನ್ ಹಗರಣಗಳೇ ಸಾಕ್ಷಿ. ಇದು ದೇಶಕ್ಕೆ ಒದಗಿರುವ ಒಂದು ದೊಡ್ಡ ಅಪಾಯ. ಜಾಗೃತ ಸಾರ್ವಜನಿಕ ಅಭಿಪ್ರಾಯ ಹಾಗೂ ವಿರೋಧ ಪಕ್ಷಗಳ ಪ್ರಯತ್ನಗಳಿಂದಾಗಿ ಕೊನೆಗೂ ಸಂಸದೀಯಸಮಿತಿ ನೇಮಕಗೊಳ್ಳದೆ. ಈ ಸಮಿತಿ ಮೂಲಾಗ್ರ ತನಿಖೆ ನಡೆಸುವಂತೆ ಮಾಡಬೇಕಾಗಿದೆ. ಅಲ್ಲದೆ, ನಮ್ಮ ದೇಶದ ದೊಡ್ಡ ಬಂಡವಾಳಶಾಹಿಗಳು ತಮ್ಮ ಕಾನೂನು ಬಾಹಿರ ಸಂಪತ್ತನ್ನು ಸ್ವಿಸ್ ಬಾಂಕ್‌ಗಳಿಗೆ ರವಾನಿಸುವುದರ ಮೇಲೆ ತಡೆಯೊಡ್ಡಿ ಈ ತಪ್ಪಿತಸ್ಥರಿಗೆ ಅತ್ಯಂತ ಕಠಿಣ ಶಿಕ್ಷೆ ವಿಧಿಸಬೇಕೆಂದೂ ಜನತೆ ಒತ್ತಾಯ ತರಬೇಕು.

ಸರ್ಕಾರ ನೇಮಿಸಲಿರುವಸಂಸದೀಯ ಸಮಿತಿಯ ವ್ಯಾಪ್ತಿಯನ್ನು ವಿಸ್ತರಿಸಿ ಸಬ್‌ಮೇರಿನ್ ಹಾಗೂ ಫ್ಯಾರ್ ಫ್ಯಾಕ್ಸ್ ಹಗರಣಗಳ ತನಿಖೆಗಳನ್ನು ಇದರಲ್ಲಿ ಒಳಗೊಳ್ಳಬೇಕೆಂಬ ಸಿ.ಪಿ.ಐ.(ಎಂ) ಹಾಗೂ ಇತರ ವಿರೋಧ ಪಕ್ಷಗಳ ಬೇಡಿಕೆಯನ್ನು ರಾಜೀವ್ ಗಾಂಧಿ ಈಗಾಗಲೇ ತಳ್ಳಿಹಾಕಿದ್ದಾರೆ. ಈಸಂಸದೀಯ ತನಿಖೆಯೊಂದಿಗೆ ಎಷ್ಟು ಚೆನ್ನಾಗಿ ಸಹಕರಿಸುತ್ತಿದೆ ಎಂಬುದರ ಮೇಲೆ ಭಾರತದ ಜನತೆ ರಾಜೀವ್‌ಗಾಂಧಿ ಸರ್ಕಾರದ ವಿಶ್ವಾಸಾರ್ಹತೆಯನ್ನು ನಿರ್ಧರಿಸುತ್ತಾರೆ ಎಂಬುದನ್ನು ಆಳುವ ಪಕ್ಷ ಗಮನದಲ್ಲಿಟ್ಟುಕೊಳ್ಳಬೇಕು. ○

ಹಿಂದೀ ಪ್ರದೇಶದಲ್ಲಿಯೂ

ಕಾಂಗ್ರೆ ಸೋಲಿನ ಆರಂಭ

ಕೇವಲ ಲೋಕದಳ [ಬಹುಗುಣ] ಪಕ್ಷವೊಂದೇ ಅಧಿಕ ಬಹುಮತವನ್ನು ಪಡೆಯುವ ಹಾದಿಯಲ್ಲಿರುವ ಹರಿಯಾಣದ ಈ ಚುನಾವಣೆಯಿಂದ 12ರಾಜ್ಯಗಳು ಕಾಂಗ್ರೆಸ್‌ನ ಕೈತಪ್ಪಿದಂತಾಗಿವೆ. ಹಿಂದೀ ಪ್ರದೇಶದಲ್ಲಿ ಸೋಲಿನ ಆರಂಭವಾಗಿದೆ. ಈ ಚುನಾವಣೆಯ ಫಲಿತಾಂಶದ ಬಗ್ಗೆ ತಮ್ಮ ಪ್ರತಿಕ್ರಿಯೆ ವ್ಯಕ್ತಪಡಿಸುತ್ತಾ ಕಾ|| ಇ.ಎಂ.ಎಸ್.ರವರು ಇಡೀ ದೇಶದಲ್ಲಿ ಕಾಂಗ್ರೆಸ್[ಐ]ಯನ್ನು ಸೋಲಿಸುವುದು ಎಂದಿಗಿಂತಲೂ ಹೆಚ್ಚು ಸಾಧ್ಯವೆಂಬುದನ್ನು ಈ ಚುನಾವಣೆಯ ಫಲಿತಾಂಶ ತೋರಿಸಿವೆ ಎಂದು ಹೇಳಿದ್ದಾರೆ.

ಹರಿಯಾಣದ ವಿಧಾನ ಸಭೆಯನ್ನು ಮೊದಲ ಬಾರಿಗೆ ಪ್ರವೇಶಿಸಲಿರುವ ಸಿ. ಪಿ. ಐ.(ಎಂ) ಅಭ್ಯರ್ಥಿ ಹರ್‌ಪಾಲ್ ಸಿಂಗ್‌ರವರು ತಮ್ಮ ಸಮೀಪದ ಕಾಂಗ್ರೆಸ್(ಐ) ಅಭ್ಯರ್ಥಿಯನ್ನು 11,481 ಬಹುಮತದಿಂದ ಸೋಲಿಸಿದ್ದಾರೆ. ಈ ಕಾಂಗ್ರೆಸ್ ಅಭ್ಯರ್ಥಿ ಭಗತ್‌ಸಿಂಗ್‌ರ ಕ್ರಾಂತಿಕಾರಿ ಗುಂಪಿಗೆ ದ್ರೋಹ ಬಗೆದು ಬ್ರಿಟಿಷರಿಗೆ ಅವರ ಸುಳಿವು ನೀಡಿ ಅಂದಿನ ಕಾಲದಲ್ಲಿಯೇ 15ಕೋಟಿ ರೂ ಲಾಭ ಪಡೆದ ಸಾವಿರಾರು ಎಕರೆ ಜಮೀನು ಪಡೆದ ದ್ರೋಹಿ. ಇವರನ್ನು ರಾಜ್ಯ ಡಿ.ವೈ.ಎಫ್.ಐ.ನ ಕಾರ್ಯದರ್ಶಿಯಾದ ಬಹಳ ಜನಾನುರಾಗಿಯಾದ ಹರ್‌ಪಾಲ್‌ಸಿಂಗ್ ಸೋಲಿಸಿದ್ದಾರೆ. ○

ಈ ವಾರ....

★ ಸಾರ್ವತ್ರಿಕ ಚುನಾವಣೆಗಳಲ್ಲಿ ಸೋಲನ್ನೊಪ್ಪಿಕೊಳ್ಳುತ್ತಾ ಲೇಬರ್ ಮುಖಂಡ ಕಿನೊಕ್ "ಬ್ರಿಟನ್ ವಿಭಜನೆಯು ಪಾತಾಳಕ್ಕಿಳಿಯುತ್ತಿದೆ. ಸಂಪ್ರದಾಯವಾದಿಗಳ ಮುಂದುವರಿಯುವ ಆಳ್ವಿಕೆಗೆ ಬಲಿಯಾಗುವವರ ಬಗ್ಗೆ ಸಂತಾಪ ಸೂಚಿಸಬೇಕಾಗಿದೆ" ಎಂದರೆ ಲೇಬರ್ ಪಕ್ಷದ ಪರಮಾಣು ನಿಶ್ಯಸ್ತ್ರೀಕರಣದ ಭಯವಿದೆ. ನ್ಯಾಟೋ ಕೂಟದ, ಮುಖ್ಯವಾಗಿ ಪಕ್ಕದ ಫ್ರಾನ್ಸ್, ಆಸ್ಟ್ರೀಯಾ ಹಾಗೂ ಜಪಾನಿನ ಸಂಪ್ರದಾಯವಾದಿ ಮುಖಂಡರು ಮತ್ತು ಅಧ್ಯಕ್ಷ ರೇಗನ್ ಥ್ಯಾಚರ್ ವಿಜಯದಿಂದ ಅತ್ಯಂತ ಸಂತುಷ್ಟರಾಗಿದ್ದಾರೆ.

ರ್‍ಯಾಟರ್ ಸುದ್ದಿ, ಜೂನ್. 12

★ ಥ್ಯಾಚರ್ ಗಟ್ಟಿ ಹೆಂಗಸು. ಉಪದ್ರವ ಕೊಡುತ್ತಿದ್ದ ಸೋಮಾರಿ ಕಾರ್ಮಿಕರನ್ನು ಸದೆ ಬಡಿದು ಇಂಗ್ಲೆಂಡಿನ ಕೈಗಾರಿಕೆ ಚಲಿಸುವಂತೆ ಮಾಡಿದಳು. ಕಲೆ, ಸಾಹಿತ್ಯ, ಸಂಗೀತ, ನಾಟಕದ ಜನರನ್ನು ಹಣದ ಮೂಲಕ ಹುರಿದುಂಬಿಸುವುದು ನಿಲ್ಲಿಸಿ ದೇಶದ ಬೊಕ್ಕಸ ಕಾಪಾಡಿದವಳು.

ಲಂಕೇಶ್ ಪತ್ರಿಕೆ, ಜೂನ್ 21.

★ ಸೀಟು ಶುಲ್ಕ ವಸೂಲಿ ಪದ್ಧತಿಯನ್ನು ಕಟುವಾಗಿ ಟೀಕಿಸಿದ ಬೆಂಗಳೂರು ವಿಶ್ವವಿದ್ಯಾಲಯದ ಉಪಕುಲಪತಿ ಡಾ.ಡಿ.ಎಂ. ನಂಜುಂಡಪ್ಪನವರು ಈ ಪರಂಪರೆಗೆ ಒಂದು ಕೊನೆ ಮಾಡಬೇಕಾದ ಅಗತ್ಯವನ್ನು ಪ್ರತಿಪಾದಿಸಿದರು.

ಪ್ರಜಾವಾಣಿ ಸುದ್ದಿ, ಜೂನ್ 13.

★ 'ಶಿಕ್ಷಣ ರಕ್ಷಿಸಿ ಸಿದ್ಧತಾ ಸಮಿತಿ' ಸ್ವಾಯತ್ತ ಕಾಲೇಜುಗಳಿಗೆ ಪರವಾನಿಗೆ ನೀಡುವ ಬೆಂಗಳೂರು ವಿಶ್ವವಿದ್ಯಾಲಯದ ಯೋಜನೆಯನ್ನು ವಿರೋಧಿಸಿದೆ. "ಹೊಸ ಶಿಕ್ಷಣ ನೀತಿ"ಯ ಫಲವಾದ ಈ ಯೋಜನೆಯು ಉಚ್ಛ ಶಿಕ್ಷಣದಲ್ಲಿ ಮೇಲು ಕೀಳು ಭಾವನೆ ಕಲ್ಪಿಸಿ ಸೀಟು ಶುಲ್ಕ, ಡೊನೇಶನ್ ಸೃಷ್ಟಿಸಿದ ಸಮಸ್ಯೆಗಳನ್ನು ಉಲ್ಬಣಗೊಳಿಸಲಿವೆ ಎಂದು ಸಮಿತಿ ಹೇಳಿದೆ.

ಡೆಕ್ಕನ್ ಹೆರಾಲ್ಡ್ ಸುದ್ದಿ, ಜೂನ್ 16

★ ಗೂರ್ಖಾಲ್ಯಾಂಡ್ ಆಂದೋಲನ ದಂಗೆಯ ರೂಪ ಪಡೆಯುವ ಲಕ್ಷಣಗಳ ಹಿನ್ನೆಲೆಯಲ್ಲಿ ಸುಭಾಸ್ ಘೈಸಿಂಗ್‌ರ 13 ದಿನಗಳ ಸಂಪೂರ್ಣ ಡಾರ್ಜಿಲಿಂಗ್ ಜಿಲ್ಲೆಯ ಬಂದ್ ಕರೆ ಅತ್ಯಂತ ಆಂತಕಕಾರಿ. ಆಂದೋಲನ ಅಂತಹ ತಿರುವನ್ನೇನಾದರೂ ಪಡೆದರೆ ಅದರ ಬಹುಪಾಲು ಹೊಣೆ ಕೇಂದ್ರ ಸರ್ಕಾರದ್ದೇ. ಪಂಜಾಬಿನಲ್ಲಿ ಭಿಂದ್ರನ್‌ವಾಲೆಯಂತೆ ಘೈಸಿಂಗ್ ಮೂಲಕ ಫ್ರಾಂಕೆನ್‌ಸ್ಟೈನ್ ರಕ್ಕಸನನ್ನು ಕೇಂದ್ರ ಸೃಷ್ಟಿಸಿದೆ.

ಇಂಡಿಯನ್ ಎಕ್ಸ್ ಪ್ರೆಸ್, ಜೂನ್ 15.

★ ವಿಶ್ವ ಬ್ಯಾಂಕ್ ರೂಪಾಯಿ ಅಪಮೌಲ್ಯದ ಸಲಹೆ ನೀಡಿಲ್ಲ; ರಫ್ತು ಮಾಡುವವರಿಗೆ ಪ್ರೋತ್ಸಾಹಕರ ಕ್ರಮಗಳು ಅಗತ್ಯ ಎಂದಿದೆಯಷ್ಟೆ. ಈ ಕ್ರಮಗಳಲ್ಲಿ ಇತರ ಅಂಶಗಳ ಜೊತೆಗೆ ವಿನಿಮಯ ದರದ ಪ್ರಶ್ನೆಯೂ ಸಹಜವಾಗಿಯೇ ಸೇರಿದೆ ಎಂದು ವಿಶ್ವ ಬ್ಯಾಂಕಿನ ಉಪಾಧ್ಯಕ್ಷ ಡೇವಿಡ್ ಹಾಪರ್ ಹೇಳಿದ್ದಾರೆ.

ಪಿ.ಟಿ.ಐ. ಸುದ್ದಿ, ಜೂನ್,17.

Printed & Published by P. Ramachandra Rao on behalf of the Communist Party of India [Marxist] Karnataka State Committee
K. V. Temple Street, Sultanpet, Bangalore-560053
Sultanpet B-53 Phone : 75331
Editorial and Managerial Office : L-56, K. V. Temple Street,
Editor P. RamachandraRao
Managing Editor : N. K. Upadhyaya